ಸಂಗ್ರಹ

ಕರ್ಣಾಟಕ

ರಾಮಾಯಣಸಂಗ್ರಹದ

ಅಯೋಧ್ಯಾಕಾಂಡವು.

ಶ್ರೀರಸ್ತು

ಅರಮನೆಯ ಇಲಾಖಾ

ಮರಹಮ್ಮತ್ ಭಕ್ಷೀರು

ಹೆಚ್. ಚಿಕ್ಕಲಿಂಗರಾಜೇಅರಸಿನವರಿಂದ

ನೂತನವಾಗಿ ರಚಿಸಲ್ಪಟ್ಟ

ಕರ್ಣಾಟಕ

ರಾಮಾಯಣ ಸಂಗ್ರಹದ

ಅಯೋಧ್ಯಾಕಾಂಡವು

ಮೈಸೂರು

ಆಸ್ಥಾನ ಪಂಡಿತ

ಪಿ. ಆರ್. ಕರಿಬಸವಶಾಸ್ತ್ರಿಗಳಿಂದ

ಪರಿಶೋಧಿಸಲ್ಪಟ್ಟು

ಮೈಸೂರು

ಶ್ರೀನಿವಾಸ ಮುದ್ರಾಶಾಲೆಯಲ್ಲಿ

ಮುದ್ರಿಸಲ್ಪಟ್ಟಿತು.

1914

PRINTED BY
S. NANJUNDA SASTRI AT
THE SREENIVASA PRESS, MYSORE

ಓಂ

ಶ್ರೀಗುರುದಕ್ಷಿಣಾಮೂರ್ತಯೇ ನಮಃ.

ಕನ್ನಡ

ರಾಮಾಯಣಸಂಗ್ರಹ.

ಅಯೋಧ್ಯಾಕಾಂಡವು.

ಭಾಮಿನೀಷಟ್ಪದಿ.

ಸೂಚನೆ || ಅರಸಿಯಾಗಿಹಕೈಕೆ ರಾಮನಿ |
ಗಿರದೆ ವನವಾಸವನು ಭರತನಿ |
ಗುರುತರದ ರಾಜ್ಯವನು ಕೇಳಿದಳೊಲಿದು ದಶರಥನ ||

ಧರೆಯುಮೇಲಣ ಸಕಲಸಂಪದ |
ಕೆರೆಯುನೆನಿಸುತ ಚಾರುಯೌವ್ವನ |
ಭರದ ಸುತರಭ್ಯುದಯ ಸಾಮ್ರಾಜ್ಯಾಭಿಷೇಚನದ ||
ನಿರುಪಮಾನಂದಾನುಭವದಿಂ |
ಮೆರೆಯುತಿಹ ದಶರಥಮಹೀಪತಿ |
ಯುರಸುತನದಾಶಳಿತಮೆಳೆದುದು ನಿಖಿಲಜನಮುನವ ||೧||

ಬಂದುದಿನದೆ ಯುಧಾಜಿತನು ಮನ ।
ದಂದು ನಿಜಸೋದರಿಯ ತನುಜನ ।
ನಂದು ಭರತನ ನೋಡಲೆಂದೈತಂದನೊಲವಿನಲಿ ॥
ಬಂದಕೇಕಯರಾಜಸುತನನು ।
ಮಂದಿರದೊಳುಪಚರಿಸೆ ಭೂಪತಿ ।
ಕುಂದದೊಲವಿಂದವನು ಕಳೆಯುತೆ ಕೆಲದಿನವನಲ್ಲಿ ॥ ೨ ॥

ಭತರಶತ್ರುಘ್ನರಿಗೆ ಚಾಪದ ।
ಪರಮವಿದ್ಯೆಯನರಿಪಲೋಸುಗ ।
ವರಗಿರಿವ್ರಜಪುರಕೆ ಕಳುಹೆಂದರಸನನು ಬೇಡಿ ॥
ತರಳರಿರ್ವರನೊಲಿದು ತನ್ನೊಡ ।
ನಿರಗೆ ಕರೆದೊಯ್ದನು ಬಳಿಕ ಭೂ ।
ವರನು ತನ್ನಯಮನದೊಳಿಂತಾಲೋಚಿಸಿದನಾಗ ॥ ೩ ॥

ವರುಷಹನ್ನೆರಡಾಯ್ತು ಮಕ್ಕಳ ।
ಪರಿಣಯೋತ್ಸವಮಾಗಿ ತನಗಿ ।
ನ್ನರಸುಗೈವವಯಸ್ಸು ಜಾರಿತು ಶಕ್ತಿಯುಡುಗಿದುದು ॥
ಹರೆಯದಾನಿಜತನುಜರೊಳಗಾ ।
ದರುಹನೀಸಾಮ್ರಾಜ್ಯಲಕ್ಷ್ಮೀ ।
ಕರಪರಿಗ್ರಹಕವನೊಳಡುವೆನು ಧರೆಯ ಭಾರವನು ॥ ೪ ॥

ಮಕ್ಕಳೊಳು ಮಾಣಿಕವು ರಾಮನು ।
ಮಿಕ್ಕಶೂರನು ಜನಮನೋಹರಾ ।
ಗಕ್ಕೆ ಪಾತ್ರನು ಮೇಣು ಹಿರಿಯನು ಸುತರುನಾಲ್ವರಲಿ ॥
ತಕ್ಕನಿವ ಯುವರಾಜಪದವಿಗೆ ।
ನಿಕ್ಕುವಮಿದೆಂದರಿದು ಮನದೊಳ ।
ಗಕ್ಕರಿಂದಾ ರಾಮಭದ್ರಂಗಿತ್ತ ನಾಪದವ ॥೫॥

ರಾಮನಾ ಯುವರಾಜಪಟ್ಟವ ।
ನೇಮದಿಂ ಕೈಕೊಳಲು ನೆಲದಲಿ ।
ತಾಮಸದ ಪೆಸರಡಗಿತೆಲ್ಲಿಯುಮಖಿಳಮಾನವರಾ ॥
ಪ್ರೇಮವಿಮ್ಮಡಿಸಿದುದು ಸುಜನರು ।
ಕಾಮಿತಾರ್ಥವ ಪಡೆದು ತಣಿದರು ।
ರಾಮರಾಜ್ಯಕ್ಕೆಣೆಯುದೆಲ್ಲಿಹುದೆಂದುದಖಿಳಜನ ॥೬॥

ಎಲ್ಲಿನೋಡಿದೊಡಲ್ಲಿ ತೃಣಮಯ ।
ಮೆಲ್ಲಿ ನೋಡಿದೊಡಲ್ಲಿ ಜಲಮಯ ।
ಮೆಲ್ಲಿ ಬಯಸಿದೊಡಲ್ಲಿ ಫಲಮಯ ಮಾದಭೂರುಹವು ॥
ಖುಲ್ಲರುಪಟಳಮಿಲ್ಲಮೆಲ್ಲಿಯು !
ಬಲ್ಲಿದರು ಬಡವರನು ಬಾಧಿಪ ।
ಸೊಲ್ಲಡಗಿತಾರಾಮಚಂದ್ರನಯೌವರಾಜ್ಯದಲಿ ॥೭॥

ಜಾರಚೋರರ ಸುಳಿವು ನಿಂದುದು ।
ಜಾರಿ ಪೋದುದು ಕಪಟವೃತ್ತಿಯು ।
ದೂರದಲ್ಲಿಯು ನಿಂದವಾ ಪರನಿಂದೆ ಪುಸಿವಾತು ॥
ಬಾರಿಬಾರಿಗು ಜನರ ಪೀಡಿಪ ।
ಮಾರಿ ಮಸಣಿಗಳುರುಬೆ ತಗ್ಗಿತು ।
ಸಾರವೀಸಂಸಾರವೆನಿಸಿತು ರಘುಜನಾಳಿಕೆಯು ॥೮॥

ನೋಡಿದನು ಭೂಪತಿಯು ಕುವರನ ।
ನಾಡಿಗಚ್ಚರಿಯೆನಿಪನಡೆಗಳ ।
ಮಾಡಿದನು ನಿಶ್ಚಯವನಿವನೊಳು ರಾಜ್ಯಭಾರವನು ॥
ರೂಢಿಮೆಚ್ಚಲು ವಹಿಸಿ ಕಳೆವೆನು ।
ನಾಡೆ ಕಾಲವ ನಿಂದುವ್ಯೌಳಿಯು ।
ರೂಢಪದವನು ಪಿಡಿದು ವಾನಪ್ರಸ್ಥವೃತ್ತಿಯಲಿ ॥೯॥

ಎನುತ ನರಪತಿ ನೆರಹಿ ಸಭೆಯನು ।
ವನಜಭವಸುತಮುಖ್ಯರಿಗೆ ನಿಜ ।
ಮನದ ಸಂಕಲ್ಪವನು ಪೇಳಿದನುಚಿತವಚನದಲಿ ॥
ಎನಗೆ ಬಂದಡಸಿದುದು ಮುಪ್ಪಿದು ।
ತನುಬಲವು ಕುಂದುತ್ತಬಂದುದು ।
ಮನುಕುಲೇಂದ್ರರ ಧರ್ಮವನು ನಿಮಗೊರೆವುದೇನಿಹುದು ॥೧೦॥

ಬಾಲತನವನು ವಿದ್ಯೆಯಿಂ ಜನ ।
ಪಾಲನೆಯಿನಾಯೌವನವನುರು ।
ಶೈಲಜೇಶನಸೇವೆಯಿಂ ವಾರ್ಧಕವನುರೆ ಕಳೆದು ॥
ಮೇಲೆ ತಾನಸುವಿಡುವಸಮಯದೆ ।
ಮೇಲುಮುಕುತಿಯ ಸೂರೆಗೊಳುವುದೆ ।
ಶೀಲವೆಮ್ಮಯ ವಂಶಭವರಿಗೆ ಯೋಗಮಾರ್ಗದಲಿ ॥೧೧॥

ನಿಮ್ಮನಾನಿದನೊಂದನರ್ಥಿಪೆ ।
ನೊಮ್ಮನದೆ ಗುಣಿರಾಮಚಂದ್ರನ ।
ಸೊಮ್ಮು ನಮ್ಮಯ ರಾಜ್ಯವಿದು ಮೇಣ್ಮಕ್ಕಳೊಳು ಪಿರಿಯಂ ॥
ಸಮ್ಮತಿಯನೀವಿತ್ತೊಡೀಗಳೆ ।
ನೆಮ್ಮದಿಯನಾನುತ್ತಲಾತಂ
ಗುಮ್ಮಹದಿ ಪಟ್ಟವನು ಕಟ್ಟುವೆನೆಂದನವನೀಶ ॥೧೨॥

ಕೇಳದೊಡನೆಯೆ ಭೂಪನಗಲಿಕೆ ।
ಗಾಲಿನೀರ್ದುಂಬಿದರು ಸಭಿಕರು ।
ಕಾಲವಾರನು ಕೇಳುಗೈಯದೆನುತ್ತ ಮರುಗಿದರು ॥
ಮೇಲೆ ರಾಮನಿಗಪ್ಪುದಿಳೆಯೆನೆ ।
ತಾಳಿದರು ಹರುಷವನು ಸದ್ಗುಣ ।
ಶಾಲಿಯಾತಗೆ ರಾಜ್ಯವೀವುದು ನಮಗೆ ಸಂಮತವು ॥೧೩॥

ದೇವ ನಿನ್ನಾಣತಿಯು ಶಿರದೊಳ್ ।
ಗಾವು ಧರಿಸುತ ಸಿದ್ಧರಪ್ಪೆವು ।
ಆವಕಾಲದೊಳೆಂಬುದನು ಬೆಸಸುವುದು ನೀನೆನಲು ॥
ಕೋವಿದರೆ ಸುಕುಮಾರರಾಮಂ ।
ಗೀವೆನಾಂ ರಾಜ್ಯವನು ನಾಳೆಯೆ ।
ನೀವು ಸಕಲವ ಸಜ್ಜುಗೊಳಿಸುವುದೆಂದನಾ ನೃಪತಿ ॥೧೪॥

ಕೇರಿಕೇರಿಯೊಳನುಪಮಧ್ವಜ ।
ತೋರಣಂಗಳ್ ಸಾಲು ಚಿತ್ರ ।
ಕಾರಮೆನಿಪಾ ಮೇಲುಕಟ್ಟುಗಳೆಸೆದವಲ್ಲಲ್ಲಿ ॥
ತೋರಮುತ್ತಿನ ಗುದಿಗಳೊಪ್ಪಿರೆ ।
ಚಾರುಸಿಂಹಾಸನದ ಬಳಿಯೊಳು ।
ಭೂರಮೆಯು ಶ್ರೀರಾಮಚಂದ್ರನ ಸೇರಲೆಳಸಿದಳು ॥೧೫॥

ಅರಸನನುಮತದಿಂದ ಪೋಗುತ ।
ಗುರುವಸಿಷ್ಠನು ರಾಮಭದ್ರಂ ।
ಗರುಹಲಾತನು ಮಾರನೆಯದಿನ ಮಜ್ಜನದಬಳಿಕ ॥
ಮೆರೆವ ಮಣಿಮಯ ಭೂಷಣವನುರೆ ।
ಧರಿಸಿ ಶುಭತಾರೆಯಲಿ ನಿಜಸತಿ ।
ವೆರಸಿ ಪಟ್ಟದಕರಿಯನೇರುತ ತಳರಿದನು ಮುದದಿ ॥೧೬॥

ಪೇಳಲೇನದ ಮೊರೆವ ವಾದ್ಯವಿ ।
ಶಾಲನಿನದಕೆ ಜಗವು ಕಿವುಡಿಡೆ ।
ಮೇಲೆಮೇಲೈತಪ್ಪ ಜನಗಳ ಭರಕೆ ನೆಲನದಿರೆ ॥
ಬಾಲೆಯರು ಬೆಳಗುತಿರೆ ತಂದು ಸಿ ।
ವಾಳಿಯನು ಪೊಂದಟ್ಟೆಗಳೊಳಾ ।
ನೀಲಮೇಘಶ್ಯಾಮನೈತರುತಿರ್ದನರಮನೆಗೆ ॥೧೭॥

ತಿಳಿದಳೀಯುತ್ಸವವ ಕೈಕೆಯು ।
ಬಳಿಯ ಮಂಥರೆಯೆಂಬ ದಾಸಿಯು ।
ಮುಳಿದಸೂಯೆಯನಾಂತು ಮನದೊಳು ಪಿಸುಣೆ ಕುದಿಯುತಲಿ ॥
ಗಳಿಲನೊಡತಿಯ ಸನಿಹಕೈದುತೆ ।
ಕಳೆದುಪೋದುದು ನಿಮ್ಮ ವೈಭವ ।
ಮಿಳೆಯೊಳಸ್ನಾವಾರನೈದುವೆವೆನುತ ಹಲುಬಿದಳು ॥೧೮॥

ಏನಿದೇನೆಲೆ ತನಗಪಾಯವ ।
ದೇನು ಜೇಗದೆ ವಿವರಿಸೆನುತಾ ।
ಮಾನವೇಶನ ಮಡದಿ ತವಕದೆ ಕೇಳಲದಕವಳು ॥
ಮಾನನಿಧಿ ಕೇಳ್ತಾಯೆ ನಿಮಗಹ ।
ಹಾನಿಯನು ನಾನೇನನುಸಿರಲಿ ।
ಸಾನುರಾಗದಿ ರಾಜ್ಯವೀವನು ನೃಪತಿ ರಾಮನಿಗೆ ॥೧೯॥

ರಾಮನರಸಾಗಲ್ಕೆ ಬಳಿಕು ।
ದ್ದಾಮಸಹ ನಿನ್ನಯ ಕುಮಾರನು ।
ಗೋಮಹಿಷಿಗಳ ಕಾವ ಗೋಪಾಲಕನು ತಾನಹನು ॥
ಕಾಮಿನಿಯರೆಲ್ಲರ್ಗೆ ಸುಲಭವೆ ।
ಭೂಮಿಯಾಳುವ ಸುತರ ಪಡೆವುದು ।
ಭಾಮಿನೀವ.ಣಿ ಕೋಸಲಾತ್ಮಜೆ ಯೋಸನೋಂತಿಪಳೋ । ೨೦॥

ಎನಲು ಮಂಥರೆ ಕೇಳಿ ಕೇಕಯು ।
ತನುಜೆ ಕನಲಿಕೆಯಾಂತು ನುಡಿವಳು ।
ಮನುಕುಲಾಗ್ರಣಿ ರಾಮಭದ್ರಂಗಾಗೆ ರಾಜ್ಯವಿದು ॥
ನಿನಗೆ ಸಂಕಟವೇನು ಕಿಲುಬಿನ ।
ಮನದತೊತ್ತೇ ಸಾಕುಸಾಕೀ ।
ಬಿನುಗುವಾತಿನ ಬವಣೆ ಕಲಹವ ಸೆಮ್ಮೊಳಿಕ್ಕುಸೆಯ ॥ ೨೧॥

ತನ್ನಜನನಿಯು ಬೇರೆ ನಾ ಬೇ ।
ರೆನ್ನುವಾ ಕವಡಿಲ್ಲ ಮನದೊಳ ।
ಗೆನ್ನ ಮಗನಲಿ ಸಲವು ಬಲುಹಾ ಜಾನಕೀಪತಿಗೆ ।
ಸನ್ನುತಾಂಗಿಯು ಕೌಸಲೆಯು. ತಾ ।
ಭಿನ್ನಭೇದವನೆನ್ನೊಳೆಣಿಸಳು ।
ಕುನ್ನಿ ನಿನಗೇಕೆಮ್ಮ ಚಿಂತೆಯು ಸುಮ್ಮನಿಹುದೆನಲು ॥ ೨೨॥

ಅಕ್ಕಟೇನೀತೆರನಿದಾಯಿ ।
ತ್ತಕ್ಕರದಿನಾನ್ನೈದಿ ಪೇಳ್ದುದು ।
ಟಕ್ಕುಟೌಳಿಗೆ ಕಾಲವಿದನಾನರಿಯದಾದೆನಲಾ ॥
ಇಕ್ಕಿದೆನು ನಾನಿಮಗೆ ವಿಷವನು ।
ಸಕ್ಕರೆಯನುಣಿಪರ್ಗೆ ಕಿವಿಗೊಡಿ ।
ಯುಕ್ಕಿಯಾಡಿದನುಡಿಯ ಮನ್ನಿಪುದೆನುತ ತಿರುಗಿದಳು ॥ ೧೩

ಕರೆಕರೆಯಿರಾ ಪಾಪಿಯನು ನ ।
ಮ್ಮರಸುತನವನು ಸರಕುಗೈವಳೆ ।
ಪಿರಿದುಸಲುಗೆಯು ನಮ್ಮೊಳಿವಳಿಗೆ ಮೇಣ್ ಬಲುವೃದ್ಧಿ ॥
ತಿರುಗಿಸಿರಿ ನೀವೆನಲು ದೂತಿಯ ।
ರಿರದೆ ತಡೆದೊಡಗೊಂಡು ಕರೆತರೆ ।
ಕರುಬುಗಾರ್ತಿಯನೇಕೆ ಬರಿಸಿದಿರೆಂದಳಾಕುಬುಜೆ ॥ ೧೪

ಎಲೆಗೆಮಂಥರೆ ನಿನ್ನ ನುಡಿಗಳು ।
ಕಲಹಬೀಜಗಳಲ್ಲವೇನೆನೆ ।
ಕಲಹಕಂಜಿದವರ್ಗೆ ಸುಖವೊದಗುವುದೆ ಪೇಳೊಡತಿ ॥
ಇಳೆಯು ರಾಮುಂಗಾಗೆ ಕೌಸಲೆ ।
ತಳಕೆ ತುಳಯಳೆ ನಿಮ್ಮ ಮೊದಲಿನ ।
ಸಲಿಗೆ ಬರ್ಪುದೆ ರಾಣಿವಾಸದ ಕಾರ್ಯಭಾರದಲಿ ॥ ೧೫

ಸರಿಬರಿಯು ಪದವಿಯನು ತಾಳುತ ।
ಧರಣಿಪನ ಮನದಣ್ಬನಾಳುತ ।
ಪಿರಿಯಸುಖದಿಂ ಬೆಳೆದಿರಾ ನೀವಿಲ್ಲಿಪರಿಯುಂತ ॥
ಅರಸಮಾತೆಯೆನಿಪ್ಪಮಿಗಿಲಹ ।
ಗರವಿಡಿಯೆ ಕೌಸಲ್ಯೆ ನಿಮ್ಮನು ।
ತರಗೆಲೆಗೆ ಕಡೆಯಾಗಿ ಕಾಣದೆ ಬಿಡುವಳೇ ತಾಯೇ ॥೨೬॥

ನಿಮ್ಮ ಹವಣೀತೆರನದಾಗಲು ।
ನಮ್ಮ ಪಾಡನು ಪೇಳಲಳವೇ ।
ಕೆಮ್ಮಕೇಕರಕಿನಿಸುಮೂದಲೆಗಳನು ತೋರಿಸುತ ॥
ಸುಮ್ಮನೆಮ್ಮನು ತಿರುಗಲೀವರೆ ।
ಹಮ್ಮುಗಾತಿಯುರವರ ಕಡೆಯುವ ।
ರಮ್ಮೆವಿಸ್ನಲ್ಲಿರಲು ದೇವಿಯೆ ಕಳುಹು ನಮ್ಮುವಸು ॥೨೭॥
ಧರಣಿಪಾಲನ ಮನವ ತಿದ್ದುತ ।
ಭರತಶತ್ರುಘ್ನರನು ದೇಶಾಂ ।
ತರಕೆ ದಾಟಿಸಿ ವಿಹಿತವಿದ್ಯಾಭ್ಯಾಸಕೆಂದೆನುತ ॥
ಭರದಿನೆಲ್ಲವ ಸಜ್ಜುಗೊಳಿಸುತ ।
ಕುರುಹುದೋರದತೆರದಿ ತನಯನಿ ।
ಗರಸುಪಟ್ಟವ ಬಿಗಿಸುತಿಹಳಾಚದುರೆ ಕೌಸಲ್ಯೆ ॥೨೮॥

ಜನನಿಯಲ್ಲವೆ ನೀವು ಮೆಚ್ಚೆನ ||
ತನಯನಲ್ಲಾ ರಾಮನವನೀ |
ದಿನದಿ ತನಗಹವೈಭವವನುಸಿರಿದನೆ ನಿರ್ಮ್ಮಡನೆ ||
ಘನವೆನಗೆ ನಿನ್ನಲ್ಲಿ ಕೂರ್ಪೆಂ |
ದೆನುತ ನುಡಿಯುತ್ತಿರ್ದಸೋದರಿ |
ಯನುವು ಚಿತ್ತಕೆ ಬಂದುದೇ ಮೇಣಿನ್ನು ಸಂಶಯವೇ ||೧೯||

ಬರೆಸುತೋಲೆಯ ಸೀಮೆಸೀಮೆಯ |
ಧರಣಿಪಾಲರ ನೆರಹಿ ಮೆಲ್ಲನೆ |
ವರಮಹೋತ್ಸವಮಿದನು ಬೆಳಸುವರೂಢಿ ರಘುಕುಲದಿ ||
ತೊರೆಯುತೀಘನವಾರ್ಗವನು ತ |
ನ್ನರಮನೆಯ ಮಕ್ಕಳನೆ ಬಿಡುತೀ |
ತುರಿಪದಿಂದಾಗಿಸುವ ವಿಭವವ ದೇವಿಯವಧರಿಸು ||೨೦||

ಪೇಳಲೀಕಥೆ ಮುಗಿವುದೇನೌ |
ಕೇಳುತಿದೆ ಭೇರೀನಿನಾದವ |
ದೇಳಿ ಬೇಗನೆ ತಕ್ಕುಪಾಯವನೆಸಗಿರಿನ್ನೆನಲು ||
ಆಳಿಯಾ ಚತುರೋಕ್ತಿಗಾಸತಿ |
ಮೌಳಿದೂಗುತೆ ಮನವ ಸೋತಳು |
ಜೋಲುಬೀಳದಕಿವಿಗಳುಂಟೇ ಪಿಸುಣಿಗರನುಡಿಗೆ ||೨೧||

ಎಲವೊ ಮಂಥರೆ ನಿನ್ನನುಡಿಗಳು ।
ನಲವಬರಿಸುವುವೆನ್ನ ಮಗನಿಗೆ ।
ಹಲವುಕಳದಿಯರಿದ್ದು ಫಲವೇನೆನ್ನನಿಳಯದಲಿ ॥
ಒಲುಮೆಮಾತುಗಳಾಡುತೆಮ್ಮನು ।
ಸುಲಿದು ತಿಂಬುವರಲ್ಲದೀಪರಿ ।
ಸಲಹಿದೊಡೆಯರಿಗೊಳ್ಳಿತೆಣಿಸವರುಂಟೆ ನಿನ್ನವೊಲು ॥ ೩೧॥

ಪರಮಹಿತಚಿಂತಕಳೆ ನೀನೀ ।
ಗೊರೆವುದೆನ್ನೊಳು ಮುಂದೆಯೆನ್ನಯ ।
ತನಯನಿಗೆ ಶುಭವಪ್ಪುಪಾಯವದಾವುದಿರ್ದಪುದು ॥
ಅರಿಯೆನಾಸಿದನೆನಲು ಮಂಥರೆ ।
ಯರಸಿಗುಸುರಿದಳಮನ ಕಿವಿಯಲಿ ।
ಸುರರುಘೋಯೆನೆ ನರರು ಥೀಯೆನೆ ಬೀಜಮಂತ್ರವನು ॥ ೩೨॥

ಅರಸಿ ದೇವಾಸುರರ ಯುದ್ಧದೊ ।
ಳರಸನಿತ್ತಿಹನೆರಡುವರಗಳ ।
ವರವದೊಂದಕೆ ರಾಮ ಜಡೆನಾರುಡೆಗಳನು ಧರಿಸಿ ॥
ತೆರಳಿ ಪದಿನಾಲ್ಕಬುದ ವನದೊಳು ।
ಚರಿಸುವುದು ಮತ್ತೆರಡನೆಯವರ ।
ಕಿರದೆ ಬೇಡುವುದರಸುಪಟ್ಟವನಿರದೆ ಭರತಂಗೆ ॥ ೩೪॥

ವೃದ್ಧರಾಯನ ಬುದ್ಧಿ ಚಪಲವು ।
ಮುದ್ದುಬೀರುವರತ್ತಲೊಲಿವುದು ।
ಹೊದ್ದುವುದು ನೀವವನನೀಗಲೆ ಸದ್ದುಗುಡದಂತೆ ॥
ಬಿದ್ದು ಪಾದಕೆ ಬಿಡದೆ ಕಲಿತಿಹ ।
ಬುದ್ಧಿಯೆಲ್ಲವ ತೋರಿಯೊಲುಮೆಯ ।
ಮದ್ದನುಣಿಸುತ ಗೆದ್ದುಕೊಂಬುದು ನಿಮ್ಮ ಕಾರ್ಯವನು ॥೩೫॥

ಎನುತ ಮಂಥರೆ ಕೈಕೆಯಾ ಮನ ।
ದೆಣಿಕೆಯನು ಪರಿಹರಿಸಲಾಕ್ಷಣ ।
ವನಿತೆ ಪೊಂದೊಡವುಗಳನೆಲ್ಲವ ಬಿಸುಟು ನೆಲಕೊರಗಿ ॥
ಇನಿಯನೈತಹಸಮಯವರಿಯುತ ।
ನನೆದು ಲೋಚನಜಲದಿ ತನ್ನಯ ।
ಮನದಬಯಕೆಯ ಪಡೆಯೆ ನಾನಾನಟನೆದೋರಿದಳು ॥೩೬॥

ಅರಸದಶರಥನಾಗ ತನ್ನಯ ।
ವರಕುಮಾರನ ರಾಜ್ಯಲಾಭದ ।
ಪಿರಿಯಸುದ್ದಿಯನಾಕೆಗರುಹುವಕುತುಕದಿಂ ಬಂದು ॥
ಅರಸಿಯಿರವನು ಕಂಡು ಜಗ್ಗನೆ ।
ಬೆರಗನಾನುತ ನಿಂದಿದೇನೀ ।
ತೆರದದುಗುಡವು ತೊಡರಿಕೊಂಡುದು ನಿನಗೆ ಮನದನ್ನೆ ॥೩೭॥

ಇದಕೆ ಕಾರಣವೇನು ನುಡಿನುಡಿ ।
ಕೆದರಿತೇಕೀಕೇಶಪಾಶವು ।
ವದನಕಳೆಗುಂದಿಹುದು ರನ್ನದ ತೊಡವು ಚದರಿಹುದು ॥
ಸುದತಿ ನಿನಗೀಪರಿ ಮನೋವ್ಯಥೆ ।
ಯೊದಗಿತಾರಿಂದೆನುತ ಗಲ್ಲವ ।
ಮುದದಿ ಪಿಡಿಯುತ ಮುದ್ದಿಸಿದನಾಕಪಟಹೃದಯಳನು ॥ ೩೮ ॥

ಕಾಂತ ನಿನ್ನೊಳಗಲ್ಲದೆನ್ನೀ ।
ಯಂತರಂಗವನಾರೊಳುಸುರಲಿ ।
ಚಿಂತೆಯಡಸಿದೊಡಾರು ಪರಿಹರಿಸುವರು ನೀನುಳಿಯೆ ॥
ಪಿಂತೆ ದೇವಾಸುರರ ಯುದ್ಧದಿ ।
ಸಂತಸದಿ ನೀನೆರಡುವರಗಳ ।
ಕಾಂತೆ ನೀಕೇಳ್ದಂದು ಕೊಡುವೆನೆನುತ್ತ ವಚಿಸಿರುವೆ ॥ ೩೯ ॥

ಜನಪತಿಯನರ್ಥಿಸಲು ತಕ್ಕುವೆ ।
ಧನಕನಕವಸ್ತುಗಳು ಲೋಕದ ।
ಜನಕೆ ದುರ್ಲಭಮೆನಿಪವರವನು ಬೇಡಬೇಕೆನುತ ॥
ಇನಿತುದಿನಕಾವಿರ್ದೆನದು ತಾ ।
ನೆನಗೆಗೋಚರವಾದುದೀಗಳು ।
ಘನಮನೋರಥವಿದನು ಬೇಡುವೆನಭಯವೀಯೆನಲು ॥ ೪೦ ॥

ಅರಸಿ ನಿನ್ನುಪಕಾರವನು ನಾಂ ।
ಮರೆಯಲಪ್ಪೆನೆ ದೇಹವುಳ್ಳ ।
ನ್ನೊರೆವುದೇನಾವರಗಳೆಂಬುವ ನೀಗಲಿತ್ತಪೆನು ।
ತಿರುಗುವರೆ ಸತ್ಪಥವ ನುಳಿಯುತೆ ।
ಧರಣಿಪಾಲರು ಕೋಮಲಾಂಗಿಯೆ ।
ಭರವಸವ ಕೊಳ್ಳೆನುತ ಬಡಿದನು ಸತಿಯು ಕರತಲವ ॥೪೧॥

ಧರಣಿಪನೆ ಕೇಳ್ವರವದೊಂದಕೆ ।
ಭರತನಿಗೆ ಪಟ್ಟಾಭಿಷೇಕವ ।
ದೆರಡನೆಯು ವರಕಿಂದು ಕಳುಹಿಸು ರಾವ.ನನು ವನಕೆ ॥
ಧರಿಸಿ ಜಟೆಯನು ನಾರಸೀರೆಯು ।
ನಿರದುಡುತೆ ಪದಿನಾಲ್ಕುವರುಷವು ।
ಚರಿಸುತಿರಬೇಕಡವಿಯೊಳಗಿವನೆಂದಳಾಕೈಕೆ ॥೪೨॥

ಕಾದಲೋಹದ ಸರಳು ಕಿವಿಯೊ।
ಳ್ಹೊಕ್ಕದವೋಲ್ಪರಿತಪಿಸಿ ಭೂಪತಿ ।
ಹಾ ದುರಾತ್ಮಳೆ ಎನುತ ಬಿದ್ದನು ಮೂರ್ಛೆ ತಲೆದೋರೆ ॥
ಆ ಧರಾಧಿಪನಿರದೆ ಯೆಚ್ಚ ।
ತ್ತಾದುದೇನಿದು ತನಗೆ ಚಿತ್ತವಿ ।
ಷಾದಮಿಂದೇಕೆನುತ ನೆನೆದನು ಸತಿಯು ಸಂಗತಿಯ ॥೪೩॥

ಎಲೆಲೆಘಾತಕಿ ದುಷ್ಟೆ ಪಾತಕಿ ।
ಕುಲವಿದೂಷಕಿ ನೆನೆದೆಯೇನನು ।
ಕಲುಷಮಾನಸೆ ನಿನಗೆ ರಾಮನದೇನಗೈದಿಹನು ॥
ಕಲಿತೆಯೆಲ್ಲಿದನಾವಳೀಪರಿ ।
ಮೊಲಿಸಿ ನಿನ್ನನು ಬೋಧಿಸಿದಳಂ ।
ಉಲಿಯುಬಹುದೇ ನೀಚವಾಕ್ಯವನೆನ್ನಸಂಮುಖದಿ ॥೪೪॥

ಪೆತ್ತಮಾತೆಯೊಳರ್ಪಮಮತೆಗೆ ।
ಹತ್ತುಪಾಲಧಿಕವೆಲೆನಿನ್ನೊಳ ।
ಉತ್ತಮೋತ್ತಮ ರಾಮಭದ್ರಂಗಿದನು ನೀನರಿದು ॥
ಸತ್ವವಂತನು ನಿಮ್ಮ ಬಾಲಕ ।
ಅತ್ಯಧಿಕಗುಣಶಾಲಿಯೆನುವಾ ।
ಎತ್ತ ಪೋಳಾಗೆತ್ತಲಡಗಿತೆ ಮೃತ್ಯುದೇವತೆಯೇ ॥೪೫॥

ಅರಿಯದಾದೆನು ಮುನ್ನ ನಿನ್ನನು ।
ಕೊರಳಮುರಿಯುವ ಮಾರಿಯೆಂಬುದ ।
ಸರಳಹೃದಯಳೆನುತ್ತ ನಂಬಿದುದಕ್ಕೆ ಫಲವಾಯ್ತು ॥
ಬರುತ ಕೇಕಯ ರಾಜವಂಶದಿ ।
ತರಣಿವಂಶದ ನೃಪನ ಸೇರುತ ।
ಎರಡುಮನೆಗಳ ಪೆಸರನಳಿಸಿದೆ ಕಷ್ಟವನು ಬಗೆದೆ ॥೪೬॥

ತಿಲಕವಿಲ್ಲದವದನವಿಂದುವ ।
ಕಳೆಯಿನೆಸೆಯುದಗಗನವಾತ್ಮಜ ।
ರುಲಿಯನರಿಯುದಸದನ ರಾಮನ ಚೆಲುವಮೂರುತಿಯ ॥
ಸುಳಿವಕಾಣದಯೋಧ್ಯೆ ಯಿದ್ದುಂ ।
ನೆಲದಿ ಫಲವೇನಕಟ ಶೂನ್ಯವು ।
ಲಲನೆ ಚಲವಿದನುಳಿದು ರಾಮನ ಸಲಹು ನೀನೆನಲು ॥ ೪೭ ॥

ರಾಯ ನಿನ್ನನು ಕಾಡುತೀನ ।
ನ್ಯಾಯದಿಂದೀವರವ ನೆಳೆದೆನೆ ।
ಕಾಯಸಾಕ್ಷಿಯೊಳದನು ನೆನಸಿದಳಲ್ಲ ಮನದೊಳಗೆ ।
ತೋಯಜಾಕ್ಷಿಯೆ ನಿನಗೆ ಮೆಚ್ಚಿದೆ ।
ಸೀಯುವೆನು ವರವೆರಡ ಬೇಡೆಂ ।
ದಾಯುಧವ ಪಿಡಿಯುತ್ತ ನುಡಿಯೆಯ ಸುರರ ಸಾಕ್ಷಿಯಲಿ ॥ ೪೮ ॥

ಹೇಯವಾಗಿಹಸುತನ ಮೋಹಣ ।
ವಾಯೆ ಬೀಸಿದವೋಹಪಾಶದಿ
ನ್ಯಾಯವೆಂಬುದ ಮರೆಯುತೆನ್ನನು ದೂರುವುದು ತರವೇ ।
ಗಾಯವಡೆದುದು ಕುಲವು ನಿನ್ನಿಂ ।
ವಾಯಿಸುವ ಮದ್ದಿಲ್ಲಲಾ ಹೋ ।
ಗಾಯಿತಿನ್ನಿದಕೀಗ ಚಿಂತಿಸೆ ಫಲವದೇನಹುದು ॥ ೪೯ ॥

ಬಂದೆಪರಮಾನ್ನವನು ಸಮನಾ |
ಗಂದು ಭಾಗಿಸುತಿತ್ತು ಪುತ್ರರೊ |
ಳೆಂದು ಭೇದವನೆಸಗಲೆಳಸಿದೆ ಮೊದಲು ಯೋಚಿಸದೆ ||
ಮಂದಮತಿಯಿಂ ಗೈದದೋಷವ |
ತಂದದಾರೊಳುಹೊರಿಸಲೆಳಸುವೆ |
ಚಂದವಲ್ಲಿದು ರಮಣಿ ನಿನಗೀಪರಿಯು ಜಾರಿಕೆಯು ||೫೦||

ಪುಟ್ಟಿಸಿದಮಾತ್ರದಲಿ ಮಗನೊಳ |
ಗಿಟ್ಟಿರುವೆ ನೀನಿನಿತುಮಮತೆಯ |
ಹೊಟ್ಟೆಯಲಿ ನವಮಾಸವಾನುತ ಪೆತ್ತಸುತನೊಳಗೆ ||
ಎಷ್ಟುಮಮತೆಯೊ ತನಗದೆಂಬುದ |
ಮುಟ್ಟಿಮನದೊಳಗರಿದು ನೋಡದೆ |
ಕೆಟ್ಟು ನುಡಿವರೆ ತನ್ನೊಳೇನಪರಾಧಮುವನಿಪನೆ ||೫೧||

ರಾಮನಿಗೆ ಸಾಮ್ರಾಜ್ಯಪದವಂ
ಪ್ರೇಮದಿಂದೀಯುತ್ತ ಕೌಸ |
ಲ್ಯಾಮನವನನುಸರಿಸಿ ಸುಖದಿಂದಿರ್ದು ನೀಬದುಕು ||
ನೇಮವೀಯೆನಗಿನ್ನು ಕಾಂತನೆ |
ತಾಮಸವನಾಂಗೈಯುದೀಗಳೆ |
ಆಮಹೋಗ್ರದವಿಷವ ಸೇವಿಸುತಸುವ ನೀಗುವೆನು ||೫೨||

ಎಂದುನುಡಿಯುತಲೆದ್ದುವಡದಿಯ
ನಂದು ಪಿಡಿದಾರಾಮನೆಂದನು ।
ಸುಂದರಾಂಗಿಯೆ ನಿನ್ನ ಮಾತಿನೊಳಿಲ್ಲ ಕವಲುಗಳು ॥
ಮುಂದುಗೆಡುತಲಿ ನುಡಿದು ನಾನೀ
ದಂಮಗಕ್ಕೊಳಗಾದೆನೀಗಳು ।
ವಂದಿಸುವೆ ನಿನಗಕಟ ಕರುಣವ ಬೀರಿ ನೀನುಳುಹು ॥೫೨॥

ಮೆರೆಯುವೀ ಇಕ್ಷ್ವಾಕುಕುಲದಲಿ
ನೆರೆ ಪರಂಪರೆಯಾಗಿ ಬಂದಿಹ ।
ಹಿರಿಯ ಮಗನಿಗೆ ರಾಜ್ಯವೆಂಬಾಪದ್ಧತಿಯನುಳಿಯೆ ॥
ಕಿರಿಯ ಹೆಂಡತಿಯೊಲುಮೆಗೋಸುಗ
ವರಸನೀಪರಿಗೈದನೆನುವರು ।
ಧರೆಯೊಳೆನಗಪಕೀರ್ತಿ ತಪ್ಪದು ಕಾಂತೆ ನೀನರಿಯೆ ॥೫೩॥

ಸವತಿಯಾತ್ಮಜನಿರವ ಸೈಸದೆ ।
ಯುವತಿಯಟ್ಟಿದಳವನು ಕಾಡಿಗೆ ।
ಕವಡೆಗಿಂ ಕಡೆಯಾಗಿ ಕಾಣುತ ಮುಪ್ಪಿನಿನಿಯನನು ॥
ಅವನಿಗವತರಿಸಿರ್ಪಮಾರಿಯೆ ।
ಇವಳು ಮಾನವಳಲ್ಲಮಿವಳಿಂ ।
ಶಿವಶಿವಿಂತಾಯ್ತೆನಯೋಧ್ಯೆಯಿದೆಂಬುದೀಲೋಕ ॥೫೪॥

ಧರೆಯೊಳಾರವಿಶಶಿಗಳಿರ್ವರು ।
ಚರಿಸುವನ್ನೆಗವೆನಗೆನಿನಗಂ ।
ದುರಿಯಶವನೊಂದಿಸುವಕಾರ್ಯವನಿಂತು ಬಳಸುವರೆ ॥
ಸುರರಸುದತಿಯರಿದನುಕಾಣು ।
ತ್ತಿರದೆ ಕೈಗಳ ಹೊಯ್ದು ನಗರೇ
ಅರಸನೀನಿದನುಳಿದು ಬೇಡಿನ್ನಿತರವರಗಳನು ॥೫೬॥

ಕಂದರಾಮನನುಳಿಯುತಸುವಿದ ।
ನೊಂದುನಿಮಿಷವು ಧರಿಸಲಾರೆನು ।
ಕೊಂದಳೈ ನಿಜಪತಿಯನಿವಳೆಂಬೊಂದು ಪೊಸಪಳಿವು ।
ಹೊಂದುವುದು ನಿನ್ನುವನು ಬಳಿಕಿನ ।
ಲೊಂದಿ ವೈಧವ್ಯವನು ತಾಳುವು ।
ದಂಡವಲ್ಲಿದು ರಮಣಿ ಬಿಡು ನಿನ್ನಲ್ಪಬುದ್ಧಿಯನು ॥೫೭॥

ಅರಸನೀಪರಿ ಬೆಸನವಡುತಿರೆ ।
ಪಿರಿಯಸಚಿವನು ವರಸುಮಂತ್ರನು ।
ಹೊರಗೆ ಸಮಯವನೀಕ್ಷಿಸುತ್ತಿಹನೆಂಬಸಂಗತಿಯ ॥
ಅರಿಪೆ ಚೇಟಿಯು ಕರೆಯುತವನೆನ ।
ಲಿರದೆ ಬಂದನು ಕಂಡನವನಿಪ ।
ಸಿರವನುರೆ ಬೆಸಗೊಂಡನಿದಕೆ ನಿಮಿತ್ತವೇನೆನುತ ॥೫೮॥

ಪೇಳುಮಂತ್ರಿಯೆ ಮೊದಲು ನೀ ಬಂ
ದೊಳಗವ ಬಳಿಕಾನೊರೆವೆನಿ ।
ವ್ಯಾಳದನ ಚರಿತವನೆನುತ್ತಾತ್ಕೈಕೆ ನಿರವಿಸಲು ॥
ತಾಳಿ ದುಗುಡವನರಿದನೀಕೇ ।
ಷಾಳಿಯಿಂ ಭೂಮಿಪನ ಒಗೆ ತಾಂ ।
ಕೇಳುಹೋಗಿಹುದೆನುತಲೊರೆದನು ಬಂದಸಂಗತಿಯ ॥೪೯॥

ತಾಯೆ ಬಿನ್ನಹ ಬಂದು ನೆರೆದಿದೆ ।
ರಾಯಸಭೆ ಮೇಣ್ಸಕಲವರ್ಣದ ।
ನಾಯಕರು ವರಸಚಿವರಾಪ್ತಸಿಯೋಗಿಜನಸಹಿತ ॥
ಕಾಯಜೋಪಮರಾಮಚಂದ್ರನು ।
ಛಾಯೆಯುಂತಿಹಸೀತೆಯೊಡನೆಯೆ ।
ರಾಯವಾಗಿಲ ಬಳಿಯಲೆಸೆವನು ಭದ್ರಗಜಮಿಳಿದು ॥೬೦॥

ರಾಮನೆಂಬೀವಾತು ಬೀಳ ।
ಲ್ಕಾಮಹೀಶನ ಕರ್ಣಕಾಗಲೆ ।
ರಾಮಜಗದಭಿರಾಮನಿರ್ಮಲನಾಮನೈದಿದನೆ ॥
ಆಮನೋರಮನೇಕೆ ಬಂದನು ।
ಈಮಹೋರಗಿಯುವನ ಬಿಡುವಳೆ ।
ಹಾ ಮಹಾಮತಿ ರಕ್ಷಿಸೈಯೆನುತರಸ ವ್ಯೆಮರೆದ ॥೬೧॥

ಒರೆಯುಲೇನನುಮಂತ್ರಿ ಭೂಪನ ।
ಚರಿಯುವನು ಕರ್ಣಾರಕಂಡೆಯು ।
ಹರಹರೇನಿದೊ ಕಾಣೆ ಮೂರ್ಛೆಗೆ ಮೂರನೆಯುಬಾರಿ ॥
ಅರಿಯುದಿಂದಾನಹಹ ಪೂರ್ವದ ।
ವರಗಳೆರಡನು ಬೇಡಿದುದರಿಂ ।
ದರಸನೀಪರಿಯಾದನೆಂಬೆನೆ ವರಗಳಲ್ಲವಲಾ ॥೬೧॥

ಅರಿವೆನಿದರ ನಿಜಾಂಶವನು ನೀ ।
ನಿರದೆ ಬೇಗನೆ ಪೋಗಿ ರಾಮನ ।
ಕರೆದು ತಹುದೆನಲಾ ಸುಮಂತ್ರನು ತೆರಳುತಲ್ಲಿಂದ ॥
ಧರಣಿ ತನ್ನಯುಮಗಳ ಗಂಡನ ।
ವರಿಪುದನುಚಿತಮೆಂದು ಭರತಗೆ ।
ಕರವ ನೀಡುವತೆರನು ಕಾಣ್ಬುದೆನುತ್ತ ಚಿಂತಿಸಿದ ॥೬೩॥

ಬರುತಲೆಲ್ಲವ ವರವಸಿಷ್ಠಂ ।
ಗೊರೆಯುತಾ ಬಳಿಕಿರ್ವರುಂ ಬೇ ।
ಸರದಿನೈತಂದಿದಿರುಗೊಂಡರು ರಾಘುವೇಶ್ವರನ ।
ಗುರುಸಚಿವರಾನನವನೀಕ್ಷಿಸಿ ।
ಮೊರೆವದುಗುಡವ ಕಂಡು ರಾಘವ ।
ನೊರೆಮುಬೇಹುದು ಕಾರಣವನಿದಕೆನುತ ಬೆಸಗೊಳಲು ॥೬೪॥

ಧರಣಿಪಾಲಂಗಿರವು ಕೈಕೆಯು ।
ಸುರುಚಿರದ ಮಂದಿರದಿ ನಿಮ್ಮನು ।
ಕರೆದುತಹುದೆಂದರಸಿಯಾಣತಿ ಬಿಜಯಗೈವುದೆನೆ ॥
ವಿರಸವಾಗಿದೆ ನಿಮ್ಮನುಡಿಯೆನೆ ।
ಧರಣಿಪತಿಯಾಕುಲನು ಚಿಂತಿಸು ।
ತಿರುವನೀಗಳು ಸಿನ್ನನೇ ಎಂದವರು ತಿಳುಹಿದರು ॥೬೫॥

ವಂದಿಮಾಗಧರುಲುಹ ನಿಲಿಸುತೆ ।
ಚಂದದಾರತಿಗಳನು ತಡೆಸುತೆ ।
ಹಿಂದೆ ಬರುತಿಹ ಜನವ ಗದರಿಸಿ ರಾಮನೈತಂದು ॥
ತಂದೆಯಡಿಗಳಗೆರಗುತವನಿ ।
ರ್ಪಂದವನು ಕಾಣುತ್ತ ಮರುಗುತ ।
ಬಂದುದೀವ್ಯಥೆ ನಿನಗದೆಂತೆಲೆ ತಾತ ನುಡಿಯೆನಲು ॥೬೬॥

ಮಗನೆ ಬಂದ್ಯೆ ರಘುಕುಲಾಂಬರ ।
ಗಗನಮಣಿ ನೀಂ ಬಂದೆಯೇನೈ ।
ಸುಗುಣಮಾಳಿಯೆ ಬಂದೆಯಾ ಬಾ ಕಂದನೇ ಯೆನುತ ॥
ಉಗುವ ಕಣ್ಣೀರಿಂದ ಸುತನನು ।
ತೆಗೆದು ಬಿಗಿಯಪ್ಪುತ್ತ ತನಗೀ ।
ಬಗೆಯ ಸುಖ ಮುಂದಿನ್ನು ದೊರೆವುದಸಾಧ್ಯಮೆಂದೆನುತ ॥೬೭॥

ಮರೆದುದೇಹವ ನಿಳೆಯೊಳೊರಗಲು ।
ಕೊರಗುತುಪಚರಿಸುತ್ತ ರಾಮನು ।
ಕಿರಿಯಮಾತೆಯ ಚರಣಕೆರಗುತ ಲಿಂತು ಕೇಳಿದನು ॥
ಕರುಣಿಸಿನ್ನೆಲೆ ತಾಯೆ ನೃಪಕೇ ।
ಸರಿಗೆ ತಾತಂಗೇನುಕಾರಣ ।
ಪರಮದಾರುಣ ದುಃಖವಿಂದಾವರಿಸಿತೆಂಬುದನು ॥೬೮॥

ಕಂದ ನಿನಗಿದನೊರೆಯಲೆಂದಾ ।
ನಿಂದು ಕರೆಸಿದೆನಯ್ಯ ಪೆರರೊಡ ।
ನೆಂದೊಡೆನ್ನಂ ಸ್ವಾರ್ಥಪರಳೆಂದಿರದೆ ದೂಷಿಪರು ॥
ಇಂದಿರನಿಗಿದಿರಾಂತ ದಾನವ ।
ವೃಂದವನು ತರಿವಾಗ ನಿಮ್ಮಯ ।
ತಂದೆಗಾಪತ್ತಡಸೆ ಪರಿಹರಿಸಿದೆನು ಸುರರಿದಿರೆ ॥೬೯॥

ಮೆಚ್ಚುತೆನ್ನಯ ಸಾಹಸಕೆ ನೃಪ ।
ನಚ್ಚರಿಯ ಪಡುತಂದು ವಲ್ಲಭೆ ।
ನೆಚ್ಚಿಕೆಯ ನುಡಿ ಸಂಬು ವರಗಳನೆರಡನಿತ್ತಪೆನು ॥
ಎಚ್ಚರದಿ ನೀನಿರ್ದು ಮನಕೆಂ ।
ದಿಚ್ಚೆಯಪ್ಪುದೊ ಕೇಳಲದನಾ ।
ನಚ್ಚಳಿಯದಂದದಲಿ ನಡೆಸುವೆನೆಂದನವನಿಪನು ॥೭೦॥

ಪಲವುಕಾಲದಿನಿದಿರುನೋಡುತ ।
ಸಲವಿನಿಂದದನಿಂದು ಬೇಡಲು ।
ಸಲಿಸಲಾರದೆ ನಿನ್ನ ಮೇಲಣ ಮೋಹದಿಂದದನು ॥
ಹಲಬುತೀಪರಿದುಃಖದಿಂ ಬಲು ।
ಬಳಲುತಿರ್ದಪನೆನಲು ಜನನಿಯೆ ।
ಸಲಿಪೆನವ ನೀವ್ಬೆಸಸಿಯೆಂದನು ರಾಮು ಕೈಮುಗಿದು ॥೨೧॥

ಎನುತೆ ನುಡಿದಾಮಗನಮಾತಿಗೆ ।
ವನಿತೆಯೊಲೆವಳು ಶಿರವನಹುದೋ ।
ತನಯ ನಿನ್ನನು ಪೆತ್ತಮಾತೆಯೆ ಧನ್ಯಳೆಳೆಯೊಳಗೆ ॥
ಮನದಭೀಷ್ಟವನುಸುರುವೆನು ಭವ ।
ದನುಜ ಭರತಂಗಿತ್ತು ರಾಜ್ಯವ ।
ವನದಿ ಹದನಾಲ್ಕಬುದ ಚರಿಪುದು ನೀನು ಜಡೆವೆರಸಿ ॥೨೨॥

ನೀತಿಯುತನಾಗಿರ್ಪ ತನುಜನೊ ।
ಶ್ವೇತಕೀಕಾರಿನ್ಯವೆನುತಲಿ ।
ಭೀತನಾಗದಿರಣುಗ ಪೇಳುವೆನಿದರ ಮರ್ಮವನು ॥
ಪಾತಕಿಯು ತಾನೆಂಬ ನಿಟ್ಟುರ ।
ಮಾತು ನನ್ನನು ಪೊರಲಿ ಬೆದರೆನು ।
ಖ್ಯಾತನಾಗಲು ನೀನು ಲೋಕದೊಳದುವೆ ಹಿತವೆನಗೆ ॥೨೩॥

ಕ್ರೂರರಾಕ್ಷಸ ರಿಳೆಯನೆಲ್ಲವ ।
ಸೂರೆಗೈಯುತಲಿರುವರವರೊಳ ।
ಪಾರ ಪೌರುಷಶಾಲಿಗಳು ದಕ್ಷಿಣದಿ ನೆಲೆಗೊಂಡು ॥
ಸಾರಿ ಸುರಲೋಕವನು ನಿರ್ಜರ ।
ನಾರಿಯರ ಸೆರೆವಿಡಿಯುತಮರರ ।
ಸೇರಗೊಡದೆಯೆ ಸಕಲಸಂಪದಕೊಡೆಯರಾಗಿಹರು ॥ ೨೪ ॥

ಕಪಟಗಳನಿರದರಿಯಲೋಸುಗ ।
ವಿಪಿನಚರರೊಳು ಸೇರಿ ನೀನಾ ।
ತಪಸಿವೇಷದೊಳಿಹುದು ನಿನಗದು ಕಾರ್ಯಸಾಧನವು ॥
ವಿಪುಲಮಂತ್ರಾಸ್ತ್ರಂಗಳೆಲ್ಲವ ।
ಗುಪಿತದಿಂ ನಿನಗೀಯಲಿಲ್ಲವೆ ।
ನೃಪಋಷಿಯು ಕೌಶಿಕನದೇಕೆಂದರಿವೆ ನೀನದನು ॥ ೨೫ ॥

ಕೆಲವರಾಡುವರಣುಗ ನಿನ್ನನು ।
ಜಲಜಭವಪಿತನೀತನೆನುತಲಿ ।
ನೆಲದಿನೀನೆಸಗಿರ್ಪಕೃತ್ಯಗಳಿದಕೆ ಸಾಕ್ಷಿಕವಾ ॥
ಹಲವುಬಗೆಯಿಂ ರಕ್ಕಸರ ಹು ।
ಯ್ಯಲನು ಮುರಿಯುತ ಜಗವ ರಕ್ಷಿಸಿ ।
ಕುಲಶಿರೋಮಣಿ ಜಸವನೊಂದ್ಯೆ ಮೂರುಲೋಕದಲಿ ॥ ೨೬ ॥

ಪೊರೆದೆ ಕೌಶಿಕಮುಖವ ತಾಟಕಿ ।
ಯರಿದೆ ಮಿಥಿಲೆಗೆ ಸರಿದೆ ಶಂಕರ ।
ನುರುವಧನುವನು ಮುರಿದೆ ಶಿಲೆಗುಸುರೆರೆದೆ ನೀನಿರದೆ ॥
ಪರಶುರಾಮನ ದರ್ಪತರುವನು ।
ತರಿದೆ ನಿನಗೇನರಿದೆ ವಿಜಯವು ।
ತೆರಳು ನೀನೆಲೆ ತರಳ ಬೇಗದೊಳರಿ ನಿಶಾಚರರ ॥ ೩೩ ॥

ಭರತನೀರಾಜ್ಯವನು ನೀನ್ನೈ ।
ತರುವಪರಿಯಂತರವು ಪೊರೆಯಲಿ ।
ಮರಳಿ ನೀಂ ಬರಲೊಡನೆ ನಿನ್ನಯಚರಣಕರ್ಪಿಸಲಿ ॥
ತರಣಿವಂಶದ ಕೀರ್ತಿಲತೆಗೀ ।
ಗೆರೆದು ನಿನ್ನಯಶೌರ್ಯಜಲವನು ।
ಸೊರಗುಗೊಡದೆಯೆ ಪರ್ಬಿಸೆನ್ನುತ ಚದುರ ಬೀರಿದಳು । ೩೪ ॥

ಮಾತೆ ನೀನಿದಕೇಕೆ ಚಿಂತಿಪ್ರ ।
ದೀತರತಿಶಯಕಾರ್ಯಮಿದು ನಿಜ ।
ತಾತನಾಡಿದಮಾತ ಪಾಲಿಸದಾತನೇಂ ಸುತನೇ ॥
ಖ್ಯಾತರಘುವಂಶಜರು ಪತ್ನೀ ।
ಜಾತರಾಜ್ಯಗಳೆಂಬಮಾಯೆಗೆ ।
ಸೋತು ಮನವನು ಧರ್ಮಸಂರಕ್ಷಣೆಯನುಳಿಯುವರೆ ॥ ೩೫ ॥

ಜನಕಜನನಿಯರಖಿಳಕಂ ಮಿಗಿ ।
ಲೆನುವನುಡಿಯೇಂ ಪೊಸತೆ ಲೋಕದಿ ।
ತನುವನಿದ ಪಡೆಯುವರು ಲಾಲನೆಗೈದು ಪಾಲಿಪರು ॥
ಕೊನೆಯ ಲಯವಂ ಕನಸಿನೊಳಗಂ ।
ನೆನೆಯರವರೀಮೂರನುಂ ತಾ ।
ನೆಣಿಕೆಗೈಯದೆ ದೈವಮೆಸಗುವುದಲ್ತೆ ಪರಿಕಿಸಲು ॥೮೦॥

ಪೇಳುತೀಪರಿ ಪಿತನ ಚರಣಕೆ ।
ಬೀಳುತೆಂದನು ಜನನಿ ನಲವಿಂ ।
ಕೇಳುವೀವರಗಳನು ಕರುಣಿಸಿ ನಿನ್ನ ನುಡಿಗಳನು ॥
ಕೋಳುಹೋಗದತೆರದೊಳುದ್ಧರಿ ।
ಸೇಳು ಚಿತ್ತದ ದುಗುಡವನು ನೀ ।
ಬೀಳುಕೊಡುತಿಂದೆನ್ನ ಕಳುಹೈ ಬೊಪ್ಪ ಕಾನನಕೆ ॥೮೧॥

ಚರಣವನು ಪಿಡಿದಿರ್ಪತನಯನ ।
ಧರಣಿಪತಿ ನೋಡುತ್ತ ಮರುಗು ।
ತ್ತಿರದೆ ಬಿಸುಸುಯ್ದುಕಟ ಮಗನೇ ಕಾಣೆ ನೀಸಿದನು ॥
ಕರುಣಮುಳಿದಿರ್ಪೀಪಿಶಾಚಿಗೆ ।
ವರಗಳಿತ್ತೆನು ನಿಜದಿ ನಾನಿ ।
ನ್ನೊರೆಯಲಾರೆನು ಮುಂದಕೆಂದವನಿಪನು ಮೈಮರೆದ ॥೮೨॥

ಪರಿಸರಿಯೊಳುಪಚರಿಸಿ ಮೂರ್ಛೆಯ ।
ಪರಿಹರಿಸಿ ನಿಜತಾತನಂಘ್ರಿಗೆ ।
ಶಿರವ ಬಾಗಿಸಿ ಕೈಕೆಗಭಿನಮಿಸುತ್ತ ರಾಘವನು ॥
ಅರಸನಾರ್ಕೈಕೆಯನು ನಿಮಗಾ ।
ದರದಿ ವಹಿಸಿದೆನಿಂದು ಜನನಿಯೆ ।
ಮರೆಯಲಾಗದು ತನ್ನನೆನುತಲ್ಲಿಂದ ಹೊರವಡಲು ॥೮೩॥

ಪುರದಿ ಹಬ್ಬಿತು ವಾರ್ತೆ ಕೇಳದ ।
ರರಸಿಯರು ಬಾಯ್ಬಿಡುತಲೈದಿದ ।
ರುರುತರದ ಶೋಕದಲಿ ಕೌಸಲ್ಯಾದಿದೇವಿಯರು ॥
ಹರಿವ ನೆನೆದಳೆ ಮಗನೆ ಸವತಿಯು ।
ಧರಣಿಪಾಲನ ಕಿವಿಯ ನುಲಿದಳೆ ।
ಕೊರೆದಳೇ ಅವನಂತನಂಗವನೆನುತ ಕೌಸಲೆಯು ॥೮೪॥

ಭರದೊಳಪ್ಪುತ ಸುತನ ಭೂಪನ ।
ತಿರುಗಿನೋಡಿದಳನಿತಕೋಸುಗ ।
ಉರುವ ಯಾಗವ ಗೈದು ಪಡೆದಿರೆ ನೀವು ನಂದನನ ॥
ಧರಿಸಿತೆನ್ನೀಪೊಡೆಯು ಕಂದನ ।
ಧರಿಸಲಾರವೆ ಮರೆಯುವರಮನೆ ।
ಪುರಗಳೆಂಬಿವು ಹರಹರಾ ನಿಷ್ಕರುಣರಾದಿರಲಾ ॥೮೫॥

ಕಂದನನು ಕಾಂತಾರಕಟ್ಟುತ ।
ಬೇದೊಡಲ ನಾನೆಂತು ಹೊರೆಯುವೆ ।
ಮಂದಭಾಗ್ಯೆಯನೇಕೆ ನೆಲನಿದು ನುಂಗದಿರ್ದಪುದೊ ॥
ಕುಂದಣವ ನಗುವೆನ್ನ ಬಾಲನ ।
ಸುಂದರಾಂಗದ ಕಾಂತಿ ವಿಪಿನದೊ ।
ಳಿಂದು ಕಂದನೆ ಮಾಣದೇಗುವೆ ನೆಂದು ಹಲುಬಿದಳು ॥೮೬॥

ಏನ ನೆನೆದೆಯೊ ಮಗನೆ ನೀನೀ ।
ಮಾನವೇಶ್ವರಪದವಿಗೊಪ್ಪದೆ ।
ಕಾನನದ ಕಡುಕಷ್ಟಕೆಳಸುವುದುಚಿತವೇ ನಿನಗೆ ॥
ಮೀನು ಧೀವರನೆಸೆವಗಾಣವ ।
ತಾನೆ ನುಂಗುತ ನರಳುವಂದದೊ ।
ಳೀನರೇಂದ್ರನು ಪಾಪಿ ಕೈಕೆಯ ಮೇಲಣಾಸೆಯಲಿ ॥೮೭॥

ಜ್ಞಾನವಿಲ್ಲದೆ ನುಡಿಯುತೊರಲಿದೊ ।
ಡೇನು ಸತ್ಯಚ್ಯುತಿಯು ದಿಟದಿಂ ।
ತಾನದಪ್ಪುದು ಮೀರಲಿಂದದನೆಂದು ಗರ್ಜಿಸುತ ॥
ನೀನಿಧಾನಿಸಲಾಗದೇಳೈ ।
ಸೂನು ಸಿಂಹಾಸನವ ನೇರೈ ।
ಸಾನುಮತವಿದು ಸಕಲಜನಕೆಂದೆಂದಳಿಂದುಮುಖಿ ॥೮೮॥

ಅರಿಯೆ ನೀನೆಲೆ ಕಂದ ನಿಮ್ಮಯ।
ಕಿರಿಯ ತಾಯಿಯು ಮೊದಲೆ ಯೆನ್ನನು ।
ಸರಕುಗೈಯಳು ಮೇಣು ನೀನಿಂತೆನ್ನನಗಲಿದೊಡೆ ॥
ನೆರವದಿಲ್ಲದನಾಥೆಯೆನುತಲಿ ।
ಪಿರಿದು ಕಷ್ಟವ ಪಡಿಪಳೆನಗಾ ।
ರಿರುವರೈ ಹಿತರಿನ್ನು ನಾನಿನ್ನೆಂತು ಜೀವಿಪೆನು ॥೮೯॥

ಕೇಳಿದನು ನಿಜಮಾತೃವಾಕ್ಯವ ।
ತಾಳಿದನು ದುಗುಡವನು ಮನದೊಳು ।
ಮೇಲನರಿಯದೆ ನುಡಿದತಂದೆಯ ಭಾಷೆಯನು ನೆನೆದು ॥
ಪಾಲಿಪೆವು ಸತ್ಯವನು ತಾವೆಂ ।
ಬಾಳುಗಳ ಕುಲದೈವ ರಾಮನು ।
ಲೋಲಲೋಚನೆಗೆರಗಿ ಬಿನ್ನೈಸಿದನು ಭಕುತಿಯಲಿ ॥೯೦॥

ತಾಯೆ ಬಿನ್ನಹವಿಂದು ನಿಮ್ಮಯ ।
ರಾಯನಾಡಿದಸತ್ಯಭಾಷೆಗ ।
ಪಾಯಬಾರದತೆರದಿ ರಕ್ಷಿಪರಾರು ನೀವುಳಿಯೆ ॥
ಕಾಯುವಸ್ಥಿರ ಸತ್ಯವೇ ನಿಜ ।
ಕಾಯುವೆನುವಾನಮ್ಮ ಕುಲಮಹ ।
ನೀಯಚರಿತೆಯನರಿಯದವರೇನಕಟ ನೀವಿಂದು ॥೯೧॥

ಪತಿಪರಾಯಣಸತಿಯರೇಂ ನಿಜ ।
ಪತಿಗೆ ಮಾರುತ್ತರವನೀಯುತ ।
ಪತಿತರೆನಿಸುತಲೇಳುಜನುಮದಿ ನರಕಕೂಪದಲಿ ।
ಅತಿಶಯದ ಯಾತನೆಯನನುಭವಿ ।
ಸುತ ದುರ್ಗತಿವಡೆವರೇ ಮಿಛಿ ।
ಮತವೆ ಸಾಧ್ವಿಯರೆನಿಪನಿಮಗಿದು ತಾಯೆ ಜಿತ್ತೈಸಿ ॥೯೨॥

ಕೇಳಿ ಲಕ್ಷ್ಮಣನಣ್ಣದೇವನ ।
ಕಾಲವಾನಪ್ರಸ್ಥವಾರ್ತೆಯ ।
ತಾಳಿ ರೌದ್ರಾವೇಶವನು ತಾನಲ್ಲಿಗೈತಂದು ॥
ಬೀಳುಗೊಟ್ಟನೆ ನಿಮ್ಮನಡವಿಗೆ ।
ಕಾಳರಕ್ಕಸಿಯೆನಿಪ ಕೈಕೆಗೆ
ಜೋಲುಗೊಟ್ಟನೆ ಕಿವಿಯ ತಂದೆಯೆನುತ್ತ ಹಲುಮೊರೆದ ॥೯೩॥

ದೇವ ನಿಮಗಾವಿಪಿನವಾಸವೆ? ।
ಭಾವಿಸಲು ಭರತಂಗೆ ರಾಜ್ಯವೆ? ।
ಕೋವಿದರು ಸಮ್ಮತಿಯನಿತ್ತರೆ? ನಮ್ಮ ಮಂತ್ರಿಗಳು ॥
ಆವದೇಶದ ಧರ್ಮವಿದು ತಾ ।
ನಾವನಿದನುಸುರಿದನು ಶಿವಶಿವ ।
ನೀವದೇತಕೆ ಮರುಳರಾದಿರಿ ಸಕಲವನು ತಿಳಿದು ॥೯೪॥

ಹಿರಿಯಮಗನಿಗೆ ರಾಜ್ಯವೆಂಬುದು ।
ಧರೆಯಮೇಲಿದು ಸುಪ್ರಸಿದ್ಧವು ।
ಮೆರೆವರಘುವಂಶದಲಿ ಹಿರಿಯಂಗೆಂಬುದಿದು ಚೋದ್ಯ ॥
ಅರಸುಪಟ್ಟವ ನಿನಗೆ ಕಟ್ಟುವೆ ।
ನರಸ ತಡವಿನ್ನೇತಕೇಳೈ ।
ಹರಿವಿರಂಚಾದಿಗಳು ತಡೆದೊಡೆ ತೊಡೆವೆನವರುಗಳ ॥ ೯೫ ॥

ತಮ್ಮನಾಡಿದನುಡಿಯಕೇಳುತ ।
ಉಮ್ಮಳಿಸಿದನು ರಾಮನೇತಕೆ ।
ಹಮ್ಮು ನೀನೀಗೆಂದನುಡಿಗಳು ಸರ್ವಸಮ್ಮತವು ॥
ಬಮ್ಮೆ ತಾತನ ವದನದಿಂ ಹೊರ ।
ಹೊಮ್ಮಲೊರ್ನುಡಿ ವೇದದವೊಲದ ।
ನೆಮ್ಮಿ ನಡೆಸಲೆಬೇಕು ನಾವ್ಗಳು ಪುತ್ರರಾದುದಕೆ ॥ ೯೬ ॥

ಹರಣವುಳಿಸಿದಳೆಂಬಸಂತಸ ।
ಕಿರದೆ ಬೆಲೆಯಾಗೆರಡುವರಗಳ ।
ನರಸನಿತ್ತನು ಮಾತೆ ತಾನದನಿಂದು ಬೇಡಿದಳು ॥
ಧರಣಿಯಧಿಕವೊ ನಮಗೆ ತಾತನ ।
ಹರಣವಧಿಕವೊ ತಿಳಿದು ನೋಡೈ ।
ಸರಿಯೆ ಲೋಕತ್ರಯದ ಸಂಪದಮಾತನೊರ್ವಂಗೆ ॥ ೯೭ ॥

ಅನುಜ ಕೇಳಿವರಿಂದ ಜನಕನ ।
ಘನವೆನಿಪವಾಗ್ದಾನವೆಮ್ಮದು ।
ವಿನಯದಿಂದದನಾಂತು ಮುಂಡೆಯೊಳೀಗ ಕಾನನದಿ ॥
ಮುನಿಯ ವೃತ್ತಿಯೊಳಾನು ವಾಸಿಪೆ ।
ಮನದ ದುಗುಡವ ನೀಗಿ ನೀನೀ ।
ಜನನಿಯನು ಸಂತೈಸುತೆನ್ನಯ ಕಾರ್ಯಕನುಮತಿಸು ॥೯೮॥

ಎಂದು ರಾಮನು ನುಡಿಯೆ ಲಕ್ಷ್ಮಣ
ನೆಂದನಗ್ರಜ ನಿನ್ನನುಜ್ಞೆಯ ।
ನೆಂದು ಮುಲ್ಲಂಘಿಸದೆನಗೆ ಬೇರೇನು ಮಾತಿಹುದು ॥
ಎಂದು ಜನಿಸಿದೆನಂದುಮೊದಲಾ ।
ಗಿಂದುವರೆಗಂ ನಿನ್ನನೆನ್ನಯ ।
ತಂದೆಯೆನುತಲೆ ಭಾವಿಸಿರ್ಪುದ ನರಿಯೆಯಾ ನೀನು ॥೯೯॥

ಪಿತನ ಸತ್ಯವ್ರತವ ಪೊರೆಯಲು ।
ಕುತುಕವಡುತಿಹ ನಿನ್ನಮನವನು ।
ಪತಿತನೆನಿಸೆನೆ ತಿದ್ದಲಿಂದಾನುಜ್ಜುಗಿಸಲಕಟಾ ॥
ಮತಿಗೆ ತೋರಿಹುದೊಂದಭೀಷ್ಟವು ।
ಹಿತದಿ ನೀನಿದ ನಡೆಸಲಾರ್ಪೊಡೆ ।
ಜತೆಗೆ ವಿಪಿನಕೆ ಕರೆದುಪೋಪುದು ದೇವ ತನ್ನುವನು ॥೧೦೦॥

ನಿನ್ನನೇ ನೆರೆನಂಬಿ ಸತತವು ।
ನಿನ್ನ ಸೇವಾನಿರತನಾಗಿರು ।
ವೆನ್ನನುಳಿಯುತ ಪೋಗಲೆನಗಿನ್ನೇನು ಗತಿ ಮುಂದೆ ॥
ಜೆನ್ನುಗಾವಲಿಗೆನ್ನನೇಮಿಸು ।
ತಣ್ಣ ನಿನ್ನರಮನೆಯೊಳಿರ್ಪಂ ।
ತಿನ್ನು ಸುಖದಿಂ ಕಳೆಯಿ ಕಾಲವ ಘೋರಕಾನನದಿ ॥೧೦೧॥

ಹೊರೆಯಿದೇಕೆಂದೆನುತಲೆನ್ನನು ।
ತೊರೆದು ನೀನ್ಪೈದಿದೊಡೆ ಸಹಜನೆ ।
ಹರಣವಿದನಾಕ್ಷಣವೆ ಬಿಡುವೆನು ಸತ್ಯವೆಂದೆನಲು ॥
ಪರಮ ಕರುಣಾರ್ಣವನು ಲಕ್ಷ್ಮಣ ।
ನುರುವಭಕ್ತಿಗೆ ಮೆಚ್ಚುತಣುಗನೆ ।
ತೆರಳಲನುವಾಗೆನುತನುಜ್ಞೆಯನಿತ್ತನತಿಮುದದಿ ॥೧೦೨॥

ಪ್ರಥಮಸಂಧಿ ಸಂಪೂರ್ಣಂ

ದ್ವಿತೀಯಸಂಧಿ ಪ್ರಾರಂಭ.

ಸೂ || ಪಿತನಭಾಷಿತಕಾಗಿ ರಾಮನು |
ಚತುರಲಕ್ಷ್ಮಣಸೀತೆಯರ ಸಂ |
ಗತಿಯೊಳಡವಿಗೆ ಗಮಿಸಿದನು ಬೇಸರದೆ ನಲವಿನಲಿ ||

ಸತಿಯರಗ್ರಣಿ ನೋಡುತಿರ್ದಳು |
ಕ್ಷಿತಿಜೆ ತನ್ನಯ ಹರಣದೊಡೆಯಂ |
ಗತಿವಿಷಾದದ ವಿಪಿನವಾಸಕ್ಲೇಶವೊದಗಿದುದ ||
ಪತಿಯ ಬಳಿಗೈತಂದು ದುಃಖಿಸು |
ತತುಳವೈಭವದಾಶೆ ನೆಗ್ಗಿತು |
ಮತಿಯ ಕರುಣಿಸು ನಾಥ ನೀನೆನಗೆಂದಳಿಂದುಮುಖಿ ||೧||

ಅರಸಿ ವಿಧಿ ತಾಂ ಬರೆದಲಿಖಿತವ |
ನೊರೆಸಲಾರಿಂದಳವು ವಿಪಿನಾಂ |
ತರಕೆ ತೆರಳುವೆನಾನು ದುಃಖಿಸಬೇಡ ನೀನಿದಕೆ ||
ಬರುವೆನವಧಿಯು ಮುಗಿದೊಡನೆ ನಾಂ |
ತರುಣಿ ಭಕ್ತಿಯೊಳತ್ತೆಮಾವಂ |
ದಿರ ಚರಣಸೇವೆಯೊಳು ತತ್ಪರೆಯಾಗಿ ನೀನಿಹುದು ||೨||

ಭರತನನು ಗೌರವಿಸು ಮೇಣವ ।
ನರಸಿಯರ ಮನಮೆಚ್ಚಿ ನಡೆ ನೆರೆ ।
ಗುರುಜನವನಾದರಿಸು ಸೇವಕತತಿಯ ಪೊರೆ ಹಿತದಿ ॥
ಪರಮಮಂತ್ರವೆನುತ್ತ ನೀನಿದ ।
ನರಿತು ನಡೆದೊಡೆ ಮುಂದೆ ಸೌಖ್ಯವು ।
ದೊರಕುವುದು ಮದಿರಾಕ್ಷಿ ನಿನಗಿನ್ನೆಂದನಾರಾಮ ॥೩॥

ಏನಿದೇನಿದು ಪತಿಯೆ ನೀನಿಂ ।
ದೀನವೀಸಾರ್ಥವನು ಪೇಳುವೆ ।
ಮಾನಿನಿಗೆ ಪತಿಸೇವೆಯೇ ವ್ರತವಲ್ಲದಿನ್ನುಂಟೆ ॥
ನೀನೆ ಮೊದಲಿದನೆನಗೆ ಬೋಧಿಸಿ ।
ಮಾನನಿಧಿ ನೀನೀಗಲೀಪರಿ ।
ಜಾಣತನದಿಂ ನುಡಿವುದಿಂತಿದು ತಕ್ಕುದೇ ನಿನಗೆ ॥೪॥

ಮುನಿಜನಂಗಳು ಧರ್ಮಸೂಕ್ಷ್ಮವ ।
ಜನಕಭೂಪನಮುಖದಿನರಿವರು ।
ತನುಜೆಯಾತಂಗೆನಿಸುತದನಿಂದರಿಯೆನೇ ನಾನು ॥
ಇನಿಯ ನಾನಿನ್ನಿಲ್ಲಿ ತಳುವದೆ ।
ಬನಕೆ ನಿನ್ನೊಡನೀಗಲೈತಹೆ ।
ನನುಮತಿಯ ನೀನಿತ್ತು ರಕ್ಷಿಸುವುದೆನ್ನ ಮನದನ್ನ ॥೫॥

ತಂದೆತಾಯ್ಗಳು ಸೋದರರು ಸುತ ।
ರೊಂದುವರು ತಾವ್ಗೈದಕರ್ಮ ।
ಕ್ಕಂದನಾದಾಫಲವ ನಿಜಸತಿಗಾತ್ಮವಲ್ಲಭನು ॥
ಪೊಂದುತಿಹ ಕರ್ಮಾನುಗುಣಸಂ ।
ಬಂಧಫಲದೊಳಗರ್ಧವೈತಹು ।
ದೆಂದು ನುಡಿಯುವೆ ವೇದಶಾಸ್ತ್ರಪುರಾಣವಚನಗಳು ॥೬॥

ಪತಿಯು ನಿನಗರ್ಧಾಂಗಿಯಾಗಿಹ ।
ಸತಿಯು ನೀನಿಲ್ಲುಳಿದು ಪೋಗಲು ।
ಪಿತನ ಸತ್ಯದ ಪಾಲನೆಯು ತಾನೆಂತು ಫಲಿಸುವುದು ॥
ಕ್ಷಿತಿಪನಾಣತಿ ನಿನಗೆಮಾತ್ರವೆ ।
ಸತಿಯೆನಿಸಿದೆನಗರ್ಧವಿಲ್ಲವೆ ।
ಮತಿಯುತನೆ ನೀನಿದರ ಮರ್ಮವ ಮರೆಯುವುದು ತರವೆ ॥೭॥

ನಿನ್ನ ಬಳಿಯಿರಲದುವೆ ಸಗ್ಗವು ।
ನಿನ್ನ ಬಳಿ ತಪ್ಪಿದೊಡೆ ನರಕವು ।
ನಿನ್ನ ಸೇವೆಯೆ ನಿತ್ಯಕರ್ಮವು ದೇವಪೂಜೆಯದು ॥
ನಿನ್ನ ನುಡಿಗಳೆ ವೇದವಾಕ್ಯವು ।
ನಿನ್ನ ದರ್ಶನವೀಶದರ್ಶನ ।
ನಿನ್ನನುಳಿದೀಯಖಿಲಲೋಕವು ಶೂನ್ಯಮಂದಿರವು ॥೮॥

ಧರಣಿಜೆಯು ನಿಜಭಾವಶುದ್ಧಿಗೆ ।
ಪರಮಧಾರ್ಮಿಕರಾಘುವೇಶನ ।
ವರಹೃದಯವಾನಂದವಾಂತುದು ಹೊರಗೆ ತೋರಿಸದೆ ॥
ತರುಣಿಯರಿಗುಪವನವೆ ವಿಪಿನವು ।
ತರಳೆ ನೀನಿದನೇಕೆ ಬಯಸುವೆ ।
ಹರಿಗಜಾದಿಕದುಷ್ಟಜಂತುಗಳಿಂದ ನಿಬಿಡವದು ॥೯॥

ಕಲ್ಲುಮುಳ್ಳುಗಳಿಂದ ಕೂಡಿದ ।
ಹಳ್ಳಕೊಳ್ಳಗಳುಳ್ಳನೆಲದಲಿ ।
ಪಲ್ಲಟಿಸಿ ಪದಪಲ್ಲವಂಗಳು ನೋಯುವೇನಿನ್ನ ॥
ಎಲ್ಲಿನೋಡಿದೊಡಲ್ಲಿ ಕತ್ತಲೆ ।
ಖುಲ್ಲಮೃಗಗಳ ಪೆರ್ಚಿದಾರ್ಭಟ ।
ವಲ್ಲಿ ಚರಿಸುವುದೆಮುಗಮುಸದಳ ಸುಲಭವೇ ನಿನಗೆ ॥೧೦॥

ಲಲನೆ ನೀನದರಿಂದಲಿಲ್ಲಿಯೆ ।
ಕೆಲವುಕಾಲವ ಕಳೆಯುತಿರ್ದೊಡೆ ।
ಹಳುವದಿಂ ಮಗುಳ್ದಿ ನಿನ್ನೀಮನಕೆ ಸಂತಸವ ।
ತಳುವದಾಸಿತ್ತಪೆನು ಸುದತಿಯೆ ।
ಕಳಕಳವ ನೀಗುತ್ತ ಪಿತೃಪದ ।
ಜಲಜಸೇವಾನಿರತೆಯಾಗಿಹುದೆಂದನಾರಾಮ ॥೧೧॥

ಶಾಂತವಾಗಲಿ ಪಾಪ ಶಿವಶಿವ ।
ಕಾಂತ ನೀನೀಪರಿಯೊಳೆಂಬರೆ ।
ಕಾಂತೆ ಬೆನ್ನಂಟಿರದೆ ಪತಿಯನು ಸಾಧ್ವಿಯೆಂತಹಳು ॥
ಕಾಂತಿವಿರಹಿತಶಶಿಯವೊಲು ದೇ ।
ಶಾಂತರಕೆ ನಿಜಪತಿಯು ಕಳುಹುತ ।
ಲೆಂತುಶೋಭಿಪಳಕಟ ಕುಲವತಿ ಯುವತಿ ಜಗದೊಳಗೆ ॥೧೨॥

ಜನಕಭೂಪನ ವಿನುತಶಿಕ್ಷೆಯು ।
ತನಗೆ ನಿನ್ನೀಪದಸರೋಜವ ।
ನನುದಿನವು ಸೇವಿಪುದು ನೀನೆಂದದನು ತಪ್ಪಿಸಲು ॥
ಮನುಕುಲಾಧಿಪ ನಿನ್ನ ಚರಣಕೆ ।
ತನುವನಿದ ಬಲಿಯಾಗಿ ಸಲಿಸುವ ।
ಘನಮನೋರಥವಲ್ಲದಿತರವನೆಳಸೆನಾನಿನ್ನು ॥೧೩॥

ವಲ್ಲಭನೆ ನಿನ್ನವಳನೀಕ್ಷಿಸಿ ।
ಖುಲ್ಲಮೃಗಗಳು ಶಾಂತವಾಗವೆ ।
ಮಲ್ಲಿಗೆಯವೊಲ್ಮೆಲ್ಲಿತೆನಿಸವೆ ಕಲ್ಲುಮುಳ್ಳುಗಳು ॥
ಎಲ್ಲಿಯದು ಭಯ ನಿನ್ನಬಳಿಯಿರೆ ।
ನಲ್ಲ ನೀನೀನಾಟಕವನೆ ।
ನ್ನಲ್ಲಿ ತೋರ್ಪರೆ ಬಲ್ಲೆ ನಾನಿದನೆಂದಳಿಂದುಮುಖಿ ॥೧೪॥

ಅರಸಿ ನಿನ್ನಯ ಬಗೆಯ ಭಾವವ ।
ಪರಿಕಿಸಲು ಬೇಕೆನುತ ನಾನಿಂ ।
ತೊರೆದೆನಲ್ಲದೆ ನಿನ್ನ ನುಳಿದೀಹರಣವಿರ್ದಪುದೇ ॥
ಮೆರೆವಸೀತಾರಾಮನಾಮವು ।
ಬರಿದೆ ಬಂದುದೆ ತನಗೆ ನಮ್ಮಯ ।
ಪರಮಮೈತ್ರಿಯ ಫಲವದಲ್ಲವೆ ಲೋಕಸಾಕ್ಷಿಯಲಿ ॥೧೪॥

ತೆರಳಲನುವಾಗಿನ್ನು ಜತೆಯಲಿ ।
ತರಳಲಕ್ಷ್ಮಣಸಹಿತ ನಾವೀ ।
ಗರಸನಾಣತಿವಡೆಯಬೇಕೆಂದೆನುತ ರಾಘವನು ॥
ಮರಳಿ ತಂದೆಯ ಬಳಿಯನೈದು ।
ತ್ತರಸಿಲಕ್ಷ್ಮಣಸಹಿತಲೆರಗುತ ।
ಚರಣಕೆಂದೆವುಗಾಜ್ಞೆಯೀಯೈ ಪೊಪ್ಪ ಕಾನನಕೆ ॥೧೬॥

ವರುಷಹದಿನಾಲ್ಕೆಂಬುದನು ನಾ ।
ವರೆಗಳಿಗೆಗೆಣೆಯಾಗಿ ಭಾವಿಸಿ ।
ಸರಸದಿಂ ಕಳೆಯುತ್ತ ಮತ್ತೆ ಭವತ್ಪದಾಬ್ಜವನು ॥
ಪರಮಸಂಭ್ರಮದಿಂದ ಪೂಜಿಪ ।
ಪರಿಯ ಕಾಂಬುವೆ ತಾತ ನಿನ್ನಯ ।
ಪರಿಕೆಯೊಂದಿರಲಾವುದಸದಳ ನಿನ್ನ ಮಕ್ಕಳಿಗೆ ॥೧೭॥

ವನಕೆ ತೆರಳಲು ತವಕಗೊಳುತಿಹ |
ತನಯನೊಡನಾಲಕ್ಷ್ಮಣನನಾ |
ವನಜಮುಖಿಸೀತೆಯನು ಕಾಣುತಲರಸನೆದೆಯೊಡೆಯೆ ||
ಮರೆದನಂಗೋಪಾಂಗವನು ಚೇ |
ತರಿಸಲೊಡನಿರದೆದ್ದು ಮಕ್ಕಳೆ |
ಪರಿಸಮಾಪ್ತಿಯದಾಯ್ತಯೋಧ್ಯೆಯ ಸಿರಿಯು ತಾನಿಂದು ||೧೮||

ಒಬ್ಬನಲ್ಲದೆ ಮೂವರಾದಿರಿ |
ಹಬ್ಬವಾದುದು ಪಾಪಿಕೈಕೆಗೆ |
ಉಬ್ಬಿ ನಲಿಯುವಳಿನ್ನು ತನ್ನಯ ಬುದ್ಧಿಕುಶಲತೆಗೆ ||
ಕೊಬ್ಬಿ ಮೆರೆಯುವಳಂದಚಂದದಿ |
ಮಬ್ಬುಗವಿಸಿದಳೆನ್ನ ಬುದ್ಧಿಗೆ |
ಉಬ್ಬಸವನೆಸಗಿತ್ತಳೀ ಪರಿ ಪುತ್ರರಗಲಿಕೆಯ ||೧೯||

ಬುದ್ಧಿಶೂನ್ಯನು ಪಿತನು ರಾಜ್ಯದ |
ವೃದ್ಧಧರ್ಮಕ್ಕೆಡರನೊದವಿಸ |
ಲುದ್ಧರಿಸಲದನವನ ಕೊಲುವಾಸುತನು ನಿರ್ದೋಷಿ ||
ಬದ್ಧಮಾದೀಕ್ಷತ್ರಧರ್ಮವ |
ನೊದ್ದುಕಳೆವರೆ ವತ್ಸರಾಮನೆ |
ವಧ್ಯನಾಗಿರುವೆನ್ನ ತರಿಯುತ ರಾಜ್ಯಕರಸೆನಿಸು ||೨೦||

ಸುತನೆ ನೀನಿದನೆಸಗಲೆನಗತಿ ।
ಹಿತವು ಕೇಳ್ಲೋಕಕಿದು ಸ ।
ಮ್ಮತವು ಬೇಗದೊಳೆನ್ನನಿರಿಯೆಂದರಸನೊರೆಯುತಿರೆ ॥
ಪಿತನೆ ತನಗೀಧರಣಿ ಮೇಣ್ಸತಿ ।
ಹಿತರುಮೆಂಬರೊಳಾಶೆಯಿಲ್ಲವು ।
ಸತತ ನಿನ್ನಯ ಸತ್ಯವುಳಿದರೆ ಸಕಲಸಂಪದವು ॥ ೨೧ ॥

ಸಾವಿರಾರಬುದಂಗಳಿಂ ನಿಜ ।
ಭಾವಶುದ್ಧಿಯೊಳಾಳ್ದು ನೆಲವನು ।
ಕೋವಿದನೆ ನಿನಗನೃತವಾದಿಯೆನಿಪ್ಪಪೆಸರ್ಬೈದೆ ॥
ನಾವು ಸುತರಾಗುದಿಸಿ ಫಲವೇ ।
ನಾವಘನವೀವಿಪಿನವಾಸವು ।
ದೇವ ಕೃಪೆಯಿಂ ಬೀಳ್ಕೊಡೆಂದನು ರಾಮನೊಲವಿನಲಿ ॥ ೨೨ ॥

ಪರಮಸತ್ಯವ್ರತನೆ ರಾಮನೆ ।
ತ್ವರಿತದಿಂದವಧಿಯನು ಮುಗಿಯಿಸಿ ।
ಮರಳಿ ಬಂದೀಧರೆಯ ಭಾರವ ವಹಿಸು ನೀನೆನುತ ॥
ಪರಸಿ ಮಗನ ಸುಮಂತ್ರನಂ ಕರೆ ।
ದರಸ ನೊರೆದನು ಸುತನ ಸಂಗಡ ।
ತೆರಳಲೆಮ್ಮಯಸೇನೆ ಬೇಕಾದುಚಿತಗಳುಸಹಿತ ॥ ೨೩ ॥

ವನದೊಳಿರುತಿಹನೆಂಬಶಂಕೆಯು ।
ಮನಕೆ ತೋರದತೆರದಿನಖಿಲವ ।
ನನುಗೊಳಿಸು ಬೊಕ್ಕಸದ ಸರ್ವಸ್ವವನು ಕಳುಹೆನಲು ॥
ವನಿತೆ ಕೇಳ್ದಳು ನುಡಿಯ ಜಠರದೊ ।
ಳನಲನುರಿದಂತಾಗೆ ಕೈಕೆಯು ।
ಜನಪನನು ದುರುದುರನೆ ನೋಡುತ ಕೆರಳುತುಸುರಿದಳು ॥ ೨೪ ॥

ಏನನಾಡಿದೆಯರಸ ನಿನಗಿದು ।
ಮಾನವೇ ನೀ ಪರಿಯೊಳೆಂಬುದು ।
ಕಾನನವನೂರಾಗಿ ಕಲ್ಪಿಸುತೂರ ಬರಿಗೈದು ।
ಏನುವಿಲ್ಲದಪಾಳುದೇಶಕೆ ।
ಮಾಸವಾಧಿಪನೆನಿಸಿ ಭರತನ ।
ನೀನದೆಂತೈ ಸತ್ಯಸಂಧರಸಾಲಿನಲಿ ಮೆರೆವೆ ॥ ೨೫ ॥

ಸೇನೆ ಮೇಣೈಸಿರಿಗಳೆನುವೀ ।
ಪ್ರಾಣವಾಯುಗಳಿಲ್ಲದಾ ನಿ ।
ಪ್ರಾಣವೆನಿಪೀರಾಜ್ಯಡಿಂಬವದೇಕೆ ಭರತನಿಗೆ ॥
ಮಾಣಲಾವರ ಸಂದಿತೆನಗಿ ।
ನ್ನೇನು ಮಗನೊಡನಡವಿವುಗುವೆನು ।
ನೀನು ರಾಮಂಗಿತ್ತು ಸಕಲವನೊಲವಿನಿಂ ಬಾಳು ॥ ೨೬ ॥

ಇಂತುಕೋಪದಿ ನುಡಿವಮಾತೆಗೆ ।
ಕಂತುಸನ್ನಿಭ ರಾಮನೆರಗುತ ।
ಚಿಂತೆ ಬೇಡಿದಕಿನ್ನು ಜನನಿಯೆ ಮನ್ನಿಪುದು ನೀನು ॥
ಸಂತಸದಿ ನಾನೆನ್ನ ತಮ್ಮಗ ।
ನಂತವಸ್ತುವು ಸಹಿತ ಭೂಮಿಯ।
ನಂತು ಮೊದಲಲಿ ಬಿಟ್ಟು ವೃತ್ತಿಯು ಮನದೊಳೆಳಸುವೆನೆ ||೨೩||

ತಂದೆಯೆನ್ನೊಳಗಧಿಕಮಮತೆಯಿ ।
ನೆಂದಮಾತ್ರದೆ ಮೌನಿವೃತ್ತಿಯೊ ।
ಳೆಂದು ಕಾಡೊಳು ಚರಿಪತನಗೀದುಂದು ಸಲ್ಲುವುದೆ ॥
ಮಂದರಾದ್ರಿಯು ಜಲದಿ ತೇಲ್ದೊಡ ।
ಮಿಂದುರವಿಗಳು ಧರಣಿಗಿಳಿದೊಡ ।
ಮೆಂದಭಾಷೆಗೆ ತಪ್ಪಿ ನಡೆಯೆನು ತಾಯೆ ಕೇಳೆಂದ ||೨೪||

ಜನನಿಗೀಯುತ್ತರವನೀಯುತ ।
ಜನಕನನು ನೋಡುತ್ತಲೆಂದನು ।
ಅನುಜಭರತಂಗಖಿಳರಾಜ್ಯವನಿತ್ತು ಬಳಿಕಿನ್ನು ॥
ತನಗೆ ವೈಭವವೇಕೆ ಹೆರರಿಗೆ ।
ತನೆಯುಹಸುವನು ಕೊಟ್ಟು ಹಗ್ಗಕೆ
ಮನದಿ ಚಿನುಗುವರಂತೆ ಕಾಣ್ಬುದು ನಮ್ಮ ನಡವಳಿಯು ||೨೫||

ಅರಸ ನಿನ್ನನು ಮುಪ್ಪಿನಲಿಯುಪ ।
ಚರಿಸದೀಪರಿ ಪೋಪೆನೆನುವಾ ।
ಕೊರತೆಯೊಂದೇ ಕೊರೆವುದಲ್ಲದೆ ಯೆಣಿಸೆನಿತರವನು ॥
ಧರಿಸಿ ಮುನಿವೇಷವನು ವಿಪಿನದಿ ।
ಚರಿಸಲೋಸುಗ ವಲ್ಕಲವ ನೀಂ ।
ಪರಸುತಿತ್ತರೆ ಸಾಕು ಸಕಲವು ಬಂದುದೆನಗಿಂದು ॥೩೦॥

ಕೇಳಿದೊಡನೆಯೆ ರಾಮನೆಂದುದ ।
ಖೂಳಕೈಕೆಯು ಪೋಗಿ ತರುತದ ।
ನೇಳು ರಾಘವ ಧರಿಸು ಕೊಳ್ಳೆಂದೆಸೆದಳದಿರಿನಲಿ ॥
ತಾಳಿ ತೋಷವ ಕರವ ನೀಡಿ ಕೃ ।
ಪಾಳುವಂಗೀಕರಿಸಿ ಯುಡುತಿರೆ ।
ಕಾಳರಕ್ಕಸಿ ನೋಡಿ ಹಿಗ್ಗಿದಳೆಂದು ಮನದಂದು ॥೩೧॥

ಜನನಿ ಯೆನಗೊಂದಿಡಲುಬೇಕೆನು ।
ತನುನಯದಿ ಲಕ್ಷ್ಮಣನು ಯಾಚಿಸು ।
ವನಿತರೊಳು ಬೇರೊಂದು ನಾರುಡೆ ಬಿದ್ದುದವನಿದಿರೆ ॥
ಘನಪರಾಕ್ರಮಿಯದನು ನಡುವಿಂ ।
ಗನುಸರಿಸಿ ಬಿಗಿಯುತಿರಲಾ ದು ।
ರ್ಜನೆಯು ಬಿಸುಡಿದಳೊಂದನಾ ಶಶಿಮುಖಿಗೆ ಜಾನಕಿಗೆ ॥೩೨॥

ಬನದಿ ಬಲೆಯನು ಕಂಡ ಹರಿಣಿಯು ।
ಮನದಿ ಬೆದರುತ ಬೆಚ್ಚುವಂದದಿ ।
ಮನುಕುಲೇಶನ ರಾಣಿಗಾದುದು ಕಾಣಲದನೊಡನೆ ॥
ತನಗಮುಡುಗೆರೆಮಿತ್ತಳತ್ತೆಯು ।
ಯೆನುತ ಕಂಬನಿಯುಗುವ ನೇತ್ರದಿ ।
ನಿನಿಯನಾ ಮೊಗ ನೋಡುತಿರ್ದಳು ತಿಳಿಯದುಡಲದನು ॥೩೩॥

ಕಂಡುದೀವ್ಯತಿಕರವ ದಶರಥ ।
ಮಂಡಲೇಶನ ರಾಣಿವರ್ಗವು ।
ದಿಂಡುದರಿವವರಿಲ್ಲಲಾ ಈ ಭಂಡಕೈಕೆಯನು ॥
ಗಂಡನಿಗೆ ಮದ್ದೊತ್ತಿ ನಮ್ಮೀ ।
ಮುಂಡೆತುಂಬಿದ ಬಳಗವನು ತಾ ।
ಕಂಡು ಸೈಸದೆ ಕಿಚ್ಚನಿಕ್ಕಿದಳೆಂದು ಪಾತಕಿಯು ॥೩೪॥

ಎಳೆಯ ಕರುವಿಗೆ ಹೊರೆಯ ಹೊರಿಸುತ ।
ಸೆಳೆಯಲಾರದೆ ನಡುಗುತಿರಲದ ।
ನೆಳೆದು ಚಾವಟಿಯಿಂದ ಹೊಡೆಯುವಪರಿಯೊಳೆಂದಿವಳು ।
ಲಲಿತಗಾತ್ರಿಯ ಜಾನಕಿಯನಾ ।
ಹಳುವಕಟ್ಟುವುದಕಟ ಸಾಲದೆ ।
ವಲುಕಲವನಿತ್ತಪಳು ಛೀ ತೆಗೆಯೆನುತ ಹಲುಬಿದುದು ॥೩೫॥

ಧೀರಗುಣಗಂಭೀರ ಸತ್ಯಾ ।
ಚಾರನಾದುದರಿಂದ ರಾಮನು ।
ಸೈರಿಸಿದನಲೆ ಮಿಕ್ಕರಿಗಿದೇಂ ಸಾಧ್ಯವೇ ಜಗದಿ ॥
ಭೀರುವಿನ ಬಳಿಗೈದಿ ನಂಬಿಸಿ ।
ನಾರಸೀರೆಯನುಡಿಸಿದನು ಸುರ ।
ನಾರಿಯರುಃ ಕಂಬನಿಯೊಳಾಳ್ದರು ಜೈದು ಕೈಕೆಯನು ॥ ೩೬ ॥

ಕಮಲಸಂಭವಸುತ ವಸಿಷ್ಠನು ।
ವಿಮಲಮೂರ್ತಿಯ ಲೋಕನಟನಾ ।
ಕ್ರಮವನರಿತುಂ ಸೈಸದೆಂದನು ದುಷ್ಟಮಾನಿನಿಗೆ ॥
ಸಮವು ಮುನಿಜನವೇಷ ರಘುಜಗೆ ।
ಭ್ರಮಿಸಿದರಸನ ವಚನರೀತಿಯೊ ।
ಳಮಮ ಕೋಮಲಗಾತ್ರಿ ಜನಕನಪುತ್ರಿಗೆಂತಹುದು ॥ ೩೭ ॥

ಒಪ್ಪಿದೊಡೆ ರಾಜಾಜ್ಞೆಯೊಂದನು ।
ಒಪ್ಪುವೆವೆ ನಿನ್ನೀ ದುರಾಕೃತ ।
ಮಪ್ಪಕಾರ್ಯವನೆನುತ ಗದರಿಸಿ ತೆಗೆಸಿದನು ಮಡಿಯ ॥
ತಪ್ಪನಿವರಾಡುವರೆ ಬಾಲಿಕೆ ।
ಯೊಪ್ಪುವಾಭರಣಾದಿವಸ್ತ್ರಗ ।
ಳಪ್ಪುವೆಲ್ಲವ ಕಳಿಪು ಜತೆಯಲಿಯೆಂದನಾನೃಪತಿ ॥ ೩೮ ॥

ಚಿತ್ತದಾಸರು ಮಧಿಕಮಪ್ಪುದು ।
ಪಿತ್ರವರಿಗಿಲ್ಲಿರ್ದೊಡಾನೆನು ।
ತುಕ್ತಮೋತ್ತಮ ರಾಮನಾಜ್ಞೆಯನೀವುದೆಮಗೆಂದು ॥
ಸುತ್ರಿ ಬಲವಂದೆರಗಿ ಜನಕರ ।
ಮತ್ತೆ ಮಲತಾಯಡಿಗೆ ವಂದಿಸಿ ।
ಹತ್ತಿಲಿರ್ದರಿಗೆಂದನೀಪರಿ ಮುಗಿದು ಕರಯುಗವ ॥೩೯॥

ಚಿತ್ತವಿಪ್ರದೀನುಡಿಯ ಸಕಲರು ।
ಸತ್ಯವಂತನು ಪತಿಯುಮೂಲ್ಯದ ।
ವಿತ್ತವಿತ್ತೊಡೆ ಸತಿಗೆ ತಾನದನಾರಿಗೀಯುವಳು ॥
ಪಿತ್ರಕುವರಂಗೀಯೆ ಚೋದ್ಯವೆ ।
ಉತ್ತಮಸ್ತ್ರೀಧರ್ಮವಲ್ಲವೆ ।
ಮತ್ತೆ ಮಧ್ಯಮಮಾತೆಯನು ನೀವೆತ್ತಿಯಾಡದಿರಿ ॥೪೦॥

ಪೋಗಿ ಬರ್ಪೆನು ನಾನು ಕಾನನ ।
ಕೀಗನಿಮ್ಮನು ಬೇಡಿಕೊಂಬೆನು ।
ರಾಗವಿರಹಿತಚಿತ್ತಮೇಣತಿವೃದ್ಧಮತ್ತಾತ ॥
ಈಗಲೆನ್ನೊಳಗಿರ್ಪನಿಮ್ಮನು ।
ರಾಗವನು ಬೀರುತ್ತಲವನನು ।
ಜಾಗರೂಕತೆಯಿಂದ ನೋಡುವುದೆಂದುಯಾಚಿಸುತ ॥೪೧॥

ವಿರಸವಾಗಿಹವುಭವಕಾಂತಿಯು ।
ಮೆರೆಯುವುಡಿಗೆಯು ನಾರಸೀರೆಯು ।
ಪರಮಪುರುಷನು ತಮ್ಮನೊಡಗೂಡುತ್ತೆಸತಿಸಹಿತ
ಧರಣಿಪಾಲನ ಬಳಿಯನುಳಿಯು ।
ತ್ತರವನೆಯು ಹೊರವಂಟು ಬಾಹ್ಯದಿ ।
ಪುರನಿವಾಸಿಗಳೆಲ್ಲ ನೆರೆದಿಹತಾಣಕ್ಕೈತಂದ ॥೩೧॥

ನೆನೆದಳೇನನು ಕೈಕೆ ಮತ್ಸರ ।
ವಿನಿತು ವನಿತೆಗದೇಕೆ ದುಷ್ಕಲ ।
ಜನಿತೆಯುಹಳಿಂದೀಕೆ ಸಜ್ಜನಶೋಕೆ ನಿರ್ಭೀಕೆ ॥
ಜನಪನಿವಳನು ತಂದು ತನ್ನರ ।
ಮನೆಗೆ ವೈಶ್ವಾನರನ ಹೊಗಿಸುತ ।
ತನುಭವರಿಗೀ ಹಾಟಗೈದನೆ ಯೆಂದುದಖಿಳಜನ ॥೩೨॥

ತಪ್ಪನೇನನು ಕಂಡು ಹಿರಿಯನೆ ।
ನಿಪ್ಪರಾಮನನಡವಿಗಟ್ಟಿದ ।
ನಿಪ್ಪಸರದೀಕಾರ್ಯಕೆಂತೊಪ್ಪಿದರು ಮಂತ್ರಿಗಳು ॥
ಕಪ್ಪವನು ನಾವ್ತೆರುವುದಿಲ್ಲವೆ ।
ಬಪ್ಪುಗೊಳಸದೆ ನಮ್ಮನೀಗಳು ।
ಮುಪ್ಪಿನವರಾ ನಹವಳಿಯುನಿವನೆಂತು ಮುರಿಯುವನು ॥೩೩॥

ಜನಪನನೆ ಕೇಳುವೆವು ನಾವೀ ।
ಗೆನುತ ಕೆಲವರು ಮತ್ತೆ ಕೆಲವರು ।
ಸನುಮತವೆ ನೀವಿಂತು ಪೇಳ್ವುದು ರಾಯನಾಜ್ಞೆಯಿದು ॥
ಜನಕನಲ್ಲವೆ ನಮಗೆ ಭೂಪತಿ ।
ಯೆಣಿಸಬಹುದೇ ತಪ್ಪನವನೊಳು ।
ಮನುವೆನಿಪನಮ್ಮಾದಿಪುರುಷನ ನೇಮವಿದು ಜಗಕೆ ॥೪೫॥

ಅದರಿನಿಂದೀರಾಯನಾಜ್ಞೆಯು ।

ಪದುಳವೀಯದಬಳಿಕ ನಮಗಿಹ ।
ಹದನು ಬೇರೇನೀಯಯೋಧ್ಯೆಯನುಳಿವುದೇಮತವು ॥
ಮುದವು ನಮಗಿದು ರಾಮಚಂದ್ರನ ।
ಪದವ ಭಜಿಸುತ ಕಾಡೊಳಿರ್ಪುದು ।
ಸದಮಲನ ಸಂಗಡವೆ ಪೋಗುವೆವೆಂದರವರಂದು ॥೪೬॥

ಪುರಜನರು ತಮತಮಗೆ ತೋರಿದ ।
ಪರಿಯೊಳಾಡುತಲಿರಲು ರಾಮನು ।
ಕರೆಯುತವರನು ಸತ್ಯಸಂಧನು ತಂದೆ ನುಡಿಸುದನು ॥
ನೆರೆಸುಪುತ್ರನು ಗೈಯದಿರಲಾ ।
ನರಕಭಾಜನನೆನಿಪನದರಿಂ ।
ಧರಿಸಿ [illegible] ತೆರಳುವೆನು ॥೪೭॥

ಭರತನೆನ್ನಯ ತಮ್ಮನಾಳ್ವನು ।
ಧರೆಯ ಸದ್ಗುಣನಿಲಯ ಸಾತ್ವಿಕ ।
ರೆರೆಯಧಾರ್ಮಿಕನವನ ಸೇರುತ ಸುಖದಿ ನೀವಿಹುದು ॥
ಭರದೊಳೀಯವಧಿಯನು ಮುಗಿಯಿಸಿ ।
ಮರಳಿ ಬಂದೀನಿಮ್ಮ ಮನಸಿಗೆ ।
ಪರುಪವಿತ್ರಪೆನೆನುತ ನಂಬಿಸಿ ಪುರದೊಳೈತಂದ ॥೪೮॥

ಮೆರೆವಯೋಧ್ಯೆಯ ರಾಜವೀಧಿಯು ।
ತೆರಹುಗುಡದಂತಾಗಿಜನಗಳ ।
ನೆರವಿಕೂಡಿತು ರಮಣಿಯರು ನೆಲೆವಾಡದಗ್ರದಲಿ ॥
ಪರಮಕರುಣಾಸಿಂಧು ಪೋಪೆಯ ।
ಚರಣನತರಕ್ಷಕನೆ ಪೋಪೆಯ ।
ದುರಿತಹರ ನೀನೆಮ್ಮನುಳಿದೊಡೆ ಪೊರೆವರಾರಿಹಗು ॥೪೯॥

ಸಿರಿಗೆ ಸಮನಹಸೀತೆಯೊಡವೆರೆ ।
ದರಸ ನೀನಿಲ್ಲಿಂದ ತೆರಳಲು ।
ನರಕವೆನಿಸದೆ ಪೊಳಲು ತಾನಿದು ದೇವ ಚಿತ್ತೈಸು ॥
ದುರುಳೆ ಕೈಕೆಯ ಮಚ್ಚರದ ನುಡಿ ।
ಗರಸ ನೀನಿಂತೆಮ್ಮನುಳಿವುದು ।
ಸರಿಯೆ ಸರ್ವೋತ್ತಮನೆ ಯೆನುತಲಿ ಜೀರ್ದುಹಲುಬಿದುದು ॥೫೦॥

ಪುರಜನಂಗಳ ದೀನರವದಿಂ ।
ಕರಗಿದಂತಃಕರಣನಾವರು ।
ಪೊರಗೆತೋರಿಸದದನು ನಡೆಯುತೆ ಪುರವ ಪೊರಮಡಲು ॥
ಅರಸನಪ್ಪಣೆವಿಡಿದು ರಥವನು ।
ವರಸುಮಂತ್ರನು ತರಲು ರಾಘವ ।
ನರಸಿ ಲಕ್ಷ್ಮಣಸಹಿತಲದರೊಳ್ಕುಳಿತು ತೆರಳಿದನು ॥೫೧॥

ಎರಡನೆಯುಸಂಧಿ ಸಂಪೂರ್ಣಂ.

ತೃತೀಯಸಂಧಿ ಪ್ರಾರಂಭವು.

ಸೂ ॥ ವರಸುಮಂತ್ರನು ವನದದೆಸೆಯಿಂ ।
ತಿರುಗಿ ಪುರಕ್ಕೈತಂದು ರಾಮನ ।
ಪರಿಯ ಪೇಳಲು ಹರಣವಳಿದನು ಕೂಡೆ ದಶರಥನು ॥

ಇಂತುಪೋಗುತಸರಯುತಮಸೆಯು ।
ಮುಂತೆವೇದಾವತಿಯುಮೊದಲಾ ।
ದಂತರದ ನದಿಗಳನು ದಾಂಟುತ ಮೂರನೆಯದಿನದಿ ॥
ಚಿಂತೆಯೊಂದದೆ ಕಂದಮೂಲಾ ।
ನಂತಫಲಗಳನುಂಡು ಪಸಿವನು ।
ಶಾಂತಭಾವವನಾಂತು ಕಳೆಯುತ ಮುಂದೆ ಪೋಗುತಿರೆ ॥೧॥

ಹರನ ಶಿರದಿಂದಿಳಿದು ಧರೆಯನು ।
ಪರಮಪಾವನಗೈದು ಮುಳುಗಿದ ।
ನರರಜನ್ಮಾಂತರದ ಪಾಪವನೆಲ್ಲ ತೊಳೆಯುತಲಿ ॥
ವರಭಗೀರಥಸಾರ್ವಭೌಮನ ।
ನಿರುಪಮಾನತಪಃಫಲದವೊಲು ।
ಮೆರವಭಾಗೀರಥಿಯ ಕಂಡರು ರಾತ್ರಿಸಮಯದಲಿ ॥ ೧ ॥

ಅಂದಿನಿರುಳನು ಕಳೆದು ಭೂರುಹ ।
ವೊಂದರಡಿಯಲಿ ಸೀತೆಸಹಿತರ ।
ವಿಂದನಯನನು ಮಾರನೆಯ ದಿನಮೇಳುತುದಯದಲಿ ॥
ಚಂದದಿಂ ಸ್ನಾನಾದಿಕರ್ಮವ ।
ನಂದು ತೀರ್ಚಿ ಸುಮಂತ್ರನೊಡನಿಂ ।
ತೆಂದ ನೆಲೆ ಸಚಿವಾಗ್ರಣಿಯೆ ಪಿಂದಿರುಗುನೀನಿನ್ನು ॥ ೨ ॥

ಅಳಲಿಗೆಡೆಯಾಗಿರ್ದತಂದೆಯ ।
ನುಳಿದು ಬಂದೆವು ಸಂತವಿಪುದಕೆ ।
ಬಳಿಯೊಳಾರಿನ್ನಿಹರು ಹಿತರಪ್ಪಾಪ್ತಮಂತ್ರಿಗಳು ॥
ಕಳುಹಿ ಚರರನು ಬೇಗ ಕರಸುತ ।
ಲಲವಿನಿಂ ಭರತನನು ಭೂಮೀ ।
ಲಲನೆಗರಸೆಂದೆನಿಸಿ ಪೊವಲಿನತೆರದಿ ನೀನಿಹುದು ॥ ೩ ॥

ತರಳಭರತನು ಭ್ರಾತೃವತ್ಸಲ ।
ನಿರತನಾದುದರಿಂದ ರಾಜ್ಯದ ।
ಸಿರಿಯನೊಲ್ಲದೆ ಮಾತೆಯನು ದುಷ್ಟಾತ್ಮಳೆಂದೆನುತ ॥
ಕೆರಳಿ ಕೋಪವನೆಸಗಲಾತಂ ।
ಗೊರೆಯ ಬುದ್ಧಿಯನಣ್ಣನಾಜ್ಞೆಯು ।
ಧರಿಸಿಮಕುಟವ ರಾಜ್ಯವಾಳೆಂದೆನುತ ಪೇಳುವುದು ॥೫೯॥

ಎನ್ನ ಮಾತೆಗೆ ಸಚ್ಚರಿತ್ರೆಗೆ ।
ಬಿನ್ನವಿಸುವುದು ನಿನ್ನ ಕುವರನು ।
ಮುನ್ನಿನಂದದಿ ಸುಖದೊಳಿರ್ಪನು ಬೇಗನೈದುವನು ॥
ಸನ್ನುತಾಂಗನ ಭರತನನು ನೀ ।
ನಿನ್ನ ನಿಜಸುತನಂತೆ ಕಾಣ್ಬುದು ।
ಮನ್ನಿಪುದು ವಿಜ್ಞಾಪನೆಯನಿದನೆಂದು ಪೇಳುವುದು ॥೬೦॥

ರಾಮನೀಪರಿನುಡಿಯಲದನಾ ।
ಸ್ವಾಮಿಭಕ್ತನು ಕೇಳ್ದು ಸಿಮ್ಮನು ।
ಈ ಮಹಾರಣ್ಯದಲಿ ಬಿಡುತಕಟೆಂತು ಪೋದಪೆನು ॥
ಕಾಮಿಕವನಾನೇನ ಬಯಸೆನು ।
ನೇಮವಿತ್ತೊಡೆ ಜತೆಯೊಳಿರ್ಪೆನು ।
ಪ್ರೇಮಿ ನೀನಿದ ಕರುಣಿಸೆಂದನು ಮಂತ್ರಿ ಕೈಮುಗಿದು ॥೬೧॥

ತನ್ನ ನೊಡನಿಹತನಗೆ ಕಾಡಿದು ।
ರಮ್ಯವಾಗಿಹಭವನದಂತಿದೆ ।
ನೆಮ್ಮದಿಗೆ ಭಯವುಂಟೆ ತನಗಿನ್ನಿಲ್ಲಿ ನೀನರಿಯಾ ॥
ಸಮ್ಮತವು ತನಗಿದುವೆ ನೀನಿಂ ।
ದೆಮ್ಮ ಮಾತಾಪಿತರನೋವುತ ।
ಲುಮ್ಮಳವ ಬಿಡಿಸಿದೊಡೆ ಸಾಕಿನ್ನೆಂದನಾರಾಮ ॥೮॥

ರಾಯಗುವರನ ಮಾತಿಗುತ್ತರ ।
ವೀಯಲಾರದೆ ನಮಿಸಿ ಕೈಕೆಯ ।
ಮಾಯೆಗಚ್ಚರಿವಡುತ ಸಚಿವನು ರಥದಿ ಮರಳಿದನು ॥
ಜೀಯರಾಮನ ಬರವ ಕೇಳುತ ।
ಲಾಯತದಿ ಸನ್ಮಿತ್ರಗುಹನೈ ।
ದೀ ಯರಣ್ಯದ ರಾಜ್ಯಭಾರವ ವಹಿಸುನೀನೆನಲು ॥೯॥

ಗುಹನೆ ನಿನಗೀಮಧುರವಚನವು ।
ವಿಹಿತವೈಸಲೆ ಮುನಿಯವೃತ್ತಿಯ ।
ವಹಿಸಿ ಬಂದಿಹತನಗೆ ನಿನ್ನೀಬಯಕೆ ಸಲ್ಲುವುದೆ ॥
ಮಿಹಿರವಂಶದ ರಾಜಪುತ್ರನು ।
ಅಹಿತಧರ್ಮಾಚರಣನೆನಿಸಿದ ।
ನಹಹ ಯೆನುತೀಜಗವು ನಗಲಾಂ ಬದುಕಿ ಫಲವೇನು ॥೧೦॥

ಎಂದು ನುಡಿಯುತ್ತಿಂಗಳದವರ ।
ಧಿಂದ ಹಾಲನು ತಂದು ಜಡೆಗಳ ।
ಸಂದು ರಚಿಸಿದೊಡಾ ಸಹೋದರಸಹಿತ ರಘುವರನು ॥
ಚಂದಿರಾನನೆ ನೋಡಿ ಪತಿಮೈ ।
ದಂದಿರಿರವನು ದುಃಖದಿಂ ಬಲು ।
ನೊಂದು ಬೈದಳು ಶಪಿಸಿ ದುಷ್ಕೃತನಿಧಿಯನಾವಿಧಿಯ ॥೧೧॥

ಜನಕಚಕ್ರೇಶ್ವರನ ಭವನದೊ ।
ಳನಿಮಿಷರ ಧಿಕ್ಕರಿಪತೇಜದಿ ।
ಘನವಿವಾಹದೊಳೆಸೆದಸಿರಿ ಮೈಸೊಬಗಿಗೀವಿಧಿಯೆ ॥
ಇನಕುಲಾನ್ವಯಸಾರ್ವಭೌಮರ ।
ವಿನುತಮಣಿಮುಕುಟಾರ್ಹವಾದೀ ।
ಘನಶಿರಕೆ ಜಟೆ ಹವಣೆಯೆಂದಳು ಹಲುಬಿ ಮೃಗನಯನೆ ॥೧೨॥

ಅರಸಿಯನು ಸಂತವಿಸಿ ರಾಮನು ।
ಮೆರೆವಯೋಧ್ಯೆಯ ಕಡೆಗೆ ತಿರುಗುತ ।
ಕರವ ಮುಗಿದನು ತರಣಿವಂಶದ ಶೂರರೆಡೆವಿಡದೆ ॥
ವರವ ಪಡೆದರು ನಿನ್ನಸೇವಿಸಿ ।
ಪರಮಪಿತೃರುಣವೆನ್ನ ತಡೆದಿದೆ ।
ಭರದಿ ತೀರಿಸುತದನು ಮರಳುವೆನುತಗ್ರಹಿಸು ॥೧೩॥

ಎನುತ ಯಾಚಿಸಿ ಗುಹನ ನೋಡುತ ।
ವಿನಯಶೀಲನೆ ಬೇಗ ನಾವೆಯ ।
ನನುಗೊಳಿಸು ನೀನೆಂದು ನುಡಿಯಲು ತರಿಸಲದನವನು ॥
ಅನುಜಸೀತೆಯರಿರ್ವರೊಡನೆಯೆ ।
ಮನುಕುಲೋದ್ಭವನೇರುತದನಾ ।
ವನಪನನು ಬೀಳ್ಕೊಟ್ಟು ದಾಂಟುತ ದೇವಗಂಗೆಯನು ॥೧೪॥

ತೆರಳುತಲ್ಲಿಂ ಮುಂದೆ ನಡೆಯು ।
ಲ್ಬರಿಸಲಸದಳವೆನಿಪಬಟ್ಟೆಯೊ ।
ಳುರುವಕಲ್ಮುಳ್ಳಿಡಿದಘೋರಾರಣ್ಯಮಧ್ಯದಲಿ ॥
ಧರಣಿಜೆಯ ಚರಣಗಳು ಕಂದಿದ ।
ವಿರದೆ ನೊಂದವು ಹಜ್ಜೆಹಜ್ಜೆಗೆ ।
ತಿರುಗಿ ಪತಿಯನು ನೋಡಿ ನಡೆದಳು ಗದಗದಿಸಿ ಯಳುತ ॥೧೫॥

ನೋಡಿದನು ರಾಘವನು ಸುದತಿಯ ।
ಪಾಡನಿವಳಕಟೆಂದಳಲ್ದಳು ।
ಕಾಡಿನಾಟವು ಸದರವಲ್ಲವು ಕಷ್ಟವೆಂದೆನಲು ॥
ಕೂಡೆ ನೀವಿರಲೇನುಭಯವೆಂ ।
ದಾಡುತೆನ್ನನು ನಂಬಿ ಬಂದಳು
ಮಾಡಲೇನನು ಮುಂದೆ ನಾನೆಂದಳಲಿದನು ಮರುಗಿ ॥೧೬॥

ಸ್ವೈರಿಸಿದನೆಲೆದೇವಿ ವಿಧಿಯನು ।
ಮೀರಲಾರಿಂದಳವು ಪೂರ್ವದೊ ।
ಳಾರನೀಪರಿಯಳಲಿಸಿದೆವೋ ಒದಗಿತಿಂದೆಮಗೆ ॥
ತೋರುತಿದೆ ನೋಡಲ್ಲಿ ಸಲಿಲವು ।
ಸಾರುತಾಜಲವೀಂಟಿ ಶ್ರಮವನು ।
ನೀರೆ ಕಳೆವೆವು ಬಾರೆನುತ ಕರವಿತ್ತು ನಡೆಸಿದನು ॥೧೭॥

ಸರಸಿಯಿರ್ಪೆಡೆಗೈದಿ ನೀರಿಂ ।
ಕರಚರಣಗಳನುರೆ ತೊಳೆದು ಬಳಿ ।
ಕಿರದೆ ತಡಿಯೊಳ್ಜಾನಕಿಯ ಕುಳ್ಳಿರಿಸಿ ಸಹಭವರು ॥
ಹರಿಣಗಳ ಬೆಂಬತ್ತಿ ಪೋಗುತ ।
ಭರದಿ ಬೇಟೆಯನಾಡಿ ಮಾಂಸದಿ ।
ಪರಿಹರಿಸಿದರು ಹಸಿವ ಸೇರುತಲೊಂದುಮರದೆಡೆಯ ॥೧೮॥

ಬಳಿಕ ಗಂಗಾಯಮುನೆಯೆರು ಸಂ ।
ಗಳಿಸಿದಮಳಕ್ಷೇತ್ರಕೈತಂ ।
ದೊಲಿದು ಭಾರದ್ವಾಜನಾತಿಥ್ಯವನು ಕೈಕೊಂಡು ॥
ಕಳೆದು ರಾತ್ರಿಯನಲ್ಲಿ ಮರುದಿನ ।
ತಳುವದವರಿಂ ಚಿತ್ರಕೂಟದ ।
ನೆಲೆಯನರಿಯುತ ಲಲ್ಲಿವಾಸಿಸಲಾಜ್ಞೆಯೊಂದಿದರು ॥೧೯॥

ತೆರಳುತಿರೆ ಗೋಚರಿಸಿತಿದಿರಲಿ ।
ಹರಿಕರಿಪ್ರಮುಖೋಗ್ರಮೃಗಭೀ ।
ಕರನುದೆಸಿಪ್ರಾಚಿತ್ರಕೂಟಾಚಲದ ಕಾನನವು ॥
ಮೆರೆವಶುಕಪಿಕಗರುಡವೊದಲಹ ।
ಪರಿಪರಿಯಪಕ್ಷಿಗಳನೊಳಕೊಂ ।
ಡುರೆ ಗಗನಮಂ ತುಡುಕುತಿಹತರುನಿಚಯದಿಂ ಕೂಡಿ ॥ ೨೦॥

ಅತ್ತ ರಥವನು ವರಸುಮಂತ್ರನು ।
ಪತ್ತಿ ತಿರುಗಿದನೊಡನೆ ನಗರಿಗೆ ।
ಚಿತ್ತದಲಿ ನೃಪಪುತ್ರರಗಲಿಕೆಗಾಗಿ ದುಃಖಿಸುತ ॥
ಹತ್ತಿರೈತರೆ ಕಂಡು ಪೌರರು ।
ಮುತ್ತಿಕೊಂಡರು ರಥದ ಸುತ್ತಲು ।
ಬೆತ್ತಲೇನು ತೇರೇತಕ್ಕೈದಿತು ರಘುಜನೆಲ್ಲೆನುತ ॥ ೨೧॥

ಪರಮಪ್ರರುಷನದೆತ್ತ ಪೋದನು ।
ಪುರಕೆ ಮರಳನೆ ನಮ್ಮ ಪೊರೆಯನೆ ।
ಚರಣಸೇವೆಯ ಸುಖವು ದೊರೆಯದೆ ಮುಂದೆ ನಮಗವನ ॥
ಅರುಹು ಸೇಸಿದನೆಂದು ಮೊರೆಯಿಡು ।
ವರನು ಸಂತವಿಡುತ್ತೆ ಮುಂದಕೆ ।
ತೆರಳುತರಮನೆಯನ್ನು ಪೊಕ್ಕನು ರಥವ ಹೊರಗಿರಿಸಿ ॥ ೨೨॥

ಬಂದಸಚಿವನ ನೋಡಿ ಭೂಪತಿ ।
ನಂದನರನಾವೆಡೆಯೊಳುಳಿದೈ ।
ಮಂದಭಾಗ್ಯಂಗೆನಗೆ ಬುದ್ಧಿಯನೇನನೆರೆದಿಹರು ॥
ಇಂದು ನೀನವರೆಂದನುಡಿಗಳ ।
ನೊಂದನಾದರುಬಿಡದೆಪೇಳುತ ।
ದಂದುಗಂಬಡುತಿರ್ಪಮನವನುಸಂತವಿರಿಸೆಂದ ॥೧೩॥

ರಾಯನಾಡಿದಮಾತಿಗುತ್ತರ ।
ವೀಯಲಸದಳವೆನಿಪದುಃಖದಿ ।
ಜೀಯ ತನಬಾಲಕರು ಮಂದಾಕಿನಿಯ ದಾಂಟುತ್ತ ।
ಕಾಯಬಲಸಾಮಕರು ನಾವಸ ।
ಹಾಯಿವೃದ್ಧನು ಜನಕನಿನಗದು ।
ನ್ಯಾಯ ತಾತನ ಸೇವೆ ಪೋಗೆಂದೆನ್ನ ಕಳುಹಿದರು ॥೧೪॥

ಇಂತು ನುಡಿದಾಮಂತ್ರಿ ತೆರಳೆ ದು ।
ರಂತವಾದಳಲಾವರಿಸಿ ನೃಪ ।
ನಂತರಂಗವ ಸುಡುತಲಿರೆ ಕೌಸಲ್ಯೆಯನು ಕರೆದು ॥
ಪಿಂತೆ ಮುನಿಪುತ್ರಂಗದೋರ್ವಂ ।
ಗಂತಕನು ನಾನಾದೆನರಿಯದೆ ।
ಚಿಂತೆಯೊಂದುತಲವನ ಪಿತರಂದೆನ್ನ ಶಪಿಸಿದರು ॥೧೫॥

ಅರಸ ನೀನಿಂದೆಮ್ಮ ಕುವರನ |
ಹರಣವಳಿಸುತಲಿನಿತುದುಃಖಕೆ |
ಗುರಿಯ ಮಾಡಿದೆ ನಮ್ಮನದರಿಂ ಪುತ್ರಶೋಕದಲಿ ||
ನರಳಿ ನಿನ್ನಸು ತೆರಳಲೆಂದರು |
ಅರಿಯಲದು ಸಂಪ್ರಾಪ್ತಮಾಯ್ತೆಂ |
ದರಸಿ ನಾನಿನ್ನುಳಿಯಲಾರೆನು ಪ್ರಾಣಕಂದುತಿದೆ || ೨೬ ||

ಇದಕೊ ಬುದ್ಧಿಭ್ರಮೆಯು ತಾನಿಂ |
ತಿದಕೊ ಪೋರುವುದೆದೆಯು ವಿಷಯಗ |
ಳಿದಕೊ ಶಬ್ದಸ್ಪರ್ಶಮುಖ್ಯಗಳೆನ್ನನಗಲುತಿವೆ |
ಪದುಮನೇತ್ರನ ಚಾರುಗಾತ್ರನ |
ಮುದವ ಬೀರುವಮಗನ ರಾಮನ |
ಪದುಳದಿಂ ತಕ್ಕೈಸಿ ನಲಿವಾಪುಣ್ಯವೆನಗೆಲ್ಲಿ || ೨೭ ||

ಪೇಳುತೀಪರಿಯೊರಗಿ ಮಂಚದಿ |
ಬೀಳುಕೊಡೆ ಪ್ರಾಣವನು ನೃಪತಿಯು |
ಗೋಳುಗುಟ್ಟುತ ಕೌಸಲೆಯುಮೊದಲಾದರಾಣಿಯರು |
ಆಳಿದನೆ ನೀನಗಲುತೆಮ್ಮನು |
ಪಾಳುಗೈಯುತಲಿಂತು ಪೋಪರೆ |
ಮೇಲೆ ರಕ್ಷಕರಾರು ನಮಗಿನ್ನೆಂದು ಹಲುಬಿದರು || ೨೮ ||

ಅರಸನಸು ಪ್ರೋಯ್ತೆಂಬವಾರ್ತೆಯ |
ನರಿದು ಬಂದರುಮಂತ್ರಿವರ್ಯರು
ತೆರನಕಂಡರು ಮರುಗಿಹವ್ಮೈಸಿದರು ನೆನೆನೆನೆದು ||
ತೆರಳಿ ಪ್ರೋದರು ರಾಮುಲಕ್ಷ್ಮಣ |
ರಿರದೆ ವನಚರರಾಗಿ ಕೇಕಯ |
ಪುರಿಯೊಳಿರುವನು ಭರತ ತಮ್ಮನುಸಹಿತ ತಾನೀಗ ||೨೯||

ಹರಣವಳಿದೀವಾರ್ತೆ ಪುರದೊಳು |
ಹರಡದಂದದಿ ಬೇಗ ಭರತನ |
ಕರೆಸಿ ನಿಲಿಸಲುಬೇಕು ರಾಜ್ಯದೊಳೆಸುತ ನಿಶ್ಚೈಸಿ ||
ತ್ವರಿತದಿಂದೋಲೆಯನು ಬರೆಯುತ |
ಚರರನಟ್ಟಿದೊಡವರು ಕೇಕಯ |
ಪುರವ ಸೇರುತಲಿತ್ತರಾಲೇಖನವ ಭರತಂಗೆ ||೩೦||

ದೇನ ನಿನ್ನಯದರ್ಶನವನೆಮ |
ಗೀವುದೀಗಲೆ ರಾಜಕಾರ್ಯದ |
ಭಾವಕೆಡುವುದು ತಳುವಿದೊಡೆಯೆಂಬೊಕ್ಕಣೆಯನೋದಿ |
ಸಾವಕಾಶವಗೈಯದಲ್ಲಿಂ |
ಕೋವಿದನು ಶತ್ರುಘ್ನಸಹಿತಲೆ |
ಮಾವನಾಣತಿಗೊಂಡಯೋಧ್ಯಾಪುರಕೆ ಮರಳಿದನು ||೩೧||

ಮೂರನೆಯ ಸಂಧಿ ಸಂಪೂರ್ಣಂ.

ನಾಲ್ಕನೆಯ ಸಂಧಿ ಪ್ರಾರಂಭವು.

ಸೂ || ಭರತನುರುತರಕೋಪದಲಿ ಧಿ |
ಕ್ಕರಿಸಿ ನಿಜಮಾತೆಯನು ರಾಮನ |
ಕರೆತರುವೆನೆಂದರಸುತೆರಿದನು ನೆಲೆಯನಗ್ರಜನಾ ||

ಬಂದುಪ್ರಗುತರಮನೆಯ ತನ್ನಯ |
ತಂದೆಯಡಿಗಳಿಗೆರಗಲೆನುತಲ |
ಮಂದತೋಷನು ಪ್ರಡುಕಿ ಕಾಣದೆ ಭೂಮಿಪನ ಸುಳಿವ ||
ಸಂದೆಗವನಾನುತ್ತ ಮನದೊಳ್ |
ಗಂದು ಮಾತೆಯನಿಳಯಕೈದುತ |
ಸಂದಭಕ್ತಿಯೊಳಾಕೆಗೆರಗುತ ತಾತನೆಲ್ಲೆನುತ ||೧||

ಕೇಳುತಿಹತನಯನನು ಕೈವಿಡಿ |
ದೇಳುಯೇಳೆಂದೆತ್ತಿ ಮುದ್ದಿಸಿ |
ಪೇಳಲೇನನು ಮಗನೆ ದೈವದೊಳಾರು ಸೆಣಸುವರು ||
ಕಾಲನೋಲಗಕೈದೆ ಪೋದನು |
ಕಾಲದಮೃತದವೃಷ್ಟಿ ನಿನ್ನಯ |
ಮೇಲೆ ಕರೆದುದು ಕಂದ ಪೆತ್ತನಗೊದಗಿತಾನಂದ ||೨||

ಮಾತೆಯಾಡಿದ ನುಡಿಯನಾಲಿಸಿ |
ಭೂತಳದ ಮೇಲೊಡನೆ ಬೀಳುತ |
ಜಾತಶತ್ರುವೆ ತಾತ ಸುಜನವ್ರಾತಸಂಪ್ರೀತ ||
ಪಾತಕಿಯೆನುತೆನ್ನ ಕರೆಸದೆ |
ಮಾತನಾಡದೆ ಜಾರಿ ಪೋದೆಯ |
ಖ್ಯಾತರಘುಕುಲಜಾತದಶರಥ ನಾಥರಾರೆನಗೆ ||೩||

ಕಾಣವಾದೆನೆ ತಂದೆಯನು ತನ |
ಗೇನನೊರೆದನು ಮತಿಯುತಾಸವ |
ಸಾನಕಾಲದಿ ಬಳಿಯೊಳಿದ್ದುಪಚರಿಸದಾದೆನಲಾ ||
ಪ್ರಾಣವಳಿವಾಕಾಲದಲಿ ಮ |
ತ್ತೇನುವೆಲ್ಲೆಂದೆನ್ನ ಕರೆದನೆ |
ಕ್ಷೋಣಿತಲಕಧಿದೇವನೆನಿಸಿಪಾನೃಪನದೆಂತಳಿದ ||೪||

ಆಮಹಾತುಮನಂತ್ಯಕಾಲದಿ |
ಕಾಮಿಸಿದಬಯಕೆಗಳನೊದವಿಸಿ |
ನೇಮದಿಂದಸುತೊಲಗಲಪರಕ್ರಿಯೆಗಳನು ಗೈದು ||
ಭೂಮಿಯಲಿ ಸತ್ಪುತ್ರರೆನಿಸಿದ |
ರಾಮಲಕ್ಷ್ಮಣರವರೆ ಧನ್ಯರು |
ನಾಮಮಾತ್ರಕ್ಕಣುಗನೆನಿಸಿದೆನಲ್ತೆ ನಾಂ ಜನಿಸಿ ||೫||

ಆದುದಾಯಿತು ತಾಯೆ ಮುಂದಿ ।
ನ್ನಾದಯಾಳುವೆನಿಪ್ಪರಾಮನ ।
ಪಾದವನು ನೆರೆ ನಂಬುತವನೇ ತಂದೆಯೆಂದೆನುತ ॥
ವೇದಸಮನೆನುತವನನುಜ್ಞೆಯ ।
ನಾದರದಿ ಕೈಕೊಂಡು ನಡೆವೆನು ।
ಸೋದರನದೆಲ್ಲಿಹನು ಪೇಳೆನಗೆನುತ ಕೈಮುಗಿದ ॥೬॥

ನಂದನನ ನುಡಿಗೇಳುತೆಂದಳು ।
ಕಂದ ಭೂಪನ ಕೊನೆಯಮಾತಿದು ।
ಸುಂದರರು ರಘುರಾಮಲಕ್ಷ್ಮಣರೆಂದು ಬರುವರು ಹಾ ॥
ಮುಂದೆ ಧನ್ಯರು ತಾವಲಾ ವನ ।
ದಿಂದಲೈತಹಮಕ್ಕಳನು ಕ ।
ಣ್ಣಿಂದಕಾಂಬುವಜನರು ತನಗಾಪುಣ್ಯವೆಲ್ಲಿಹುದು ॥೭॥

ಎನುತ ಕನವರಿಸುತ್ತ ತೊರೆದನು ।
ಜನಪನಸುವನೆನಲ್ಕೆ ಮೊದಲೇ ।
ಜನಕನಳಿವಿಂ ನೊಂದಮನಕದು ಸಿಡಿಲಿನಂತೆರಗೆ ॥
ಜನನಿ ನುಡಿನುಡಿ ಯಣ್ಣದೇವನು ।
ವನಕೆ ನಡೆವನೆ ಪುರದೊಳಿಲ್ಲವೆ ।
ಮನುಕುಲೇಶನು ಪೋದಕಾರಣವೇನು ಪೇಳೆನಗೆ ॥೮॥

ಇಂತು ನುಡಿವಾಸುತನ ಮುದ್ದಿಸು ।
ತಂತರಂಗದಿ ಹಿಗ್ಗುತಿವನಿಗೆ ।
ಸಂತಸವ ಬೀರುವೆನು ತಾನೆಂದೆಣಿಸುತಾಸುದತಿ ॥
ಚಿಂತೆಗೈವರೆ ಮಗನೆ ನಿನಗೆ ಸ।
ಮಂತು ಘನಸಂಪದವನೊದವಿಸಿ ।
ದಂತಕಳಚಿದನಂತನೆನಿಸಿದೆನಿಂದು ರಾಮನನು ॥೯॥

ಧರಣಿಪತಿ ಪಿಂತೊಮ್ಮೆ ವರಗಳ ।
ನೆರಡನಿತ್ತನು ತನಗೆ ತಾನಿಂ ।
ದರಿಕೆಗೈಯುತ ಪಡೆದೆನೊಂದಕೆ ನಿನಗೆ ರಾಜ್ಯವನು ॥
ಎರಡನೆಯುವರಕಿಂದು ರಾಮನು ।
ಧರಿಸಿ ಮುನಿವೇಷವನು ವಿಪಿನದಿ ।
ಚರಿಸಬೇಹುದೆನುತ್ತನುಜ್ಞೆಯ ಪಡೆಯುತಟ್ಟಿದೆನು ॥೧೦॥

ಬಿಡೆಮನಿಲ್ಲದವಸ್ತುಗಳವೋ ।
ಲೊಡನೆ ಸೀತಾಲಕ್ಷ್ಮಣರು ದೆಸೆ ।
ಗೆಡುತಲವನನೆ ನೆಮ್ಮಿ ಪೋದರು ಬಾರರಿನ್ನವರು ॥
ಗಡುಬವೋ ಪದಿನಾಲ್ಕುವರುಷವು ।
ಕಡೆಯ ಕಾಣಿಸುತದನು ಮರಳುತ ।
ಪೊಡವಿಯಾಳ್ವಬಯಕೆ ರಾಮಂಗಿನ್ನದೆಲ್ಲಿಯದು ॥೧೧॥

ಮಗನೆ ಚಕ್ರಾಧೀಶನಾಗುತ ।
ವಿಗಡಬಲನೆನಿಸುತ್ತೆ ಪಿತ್ರನ ।
ಗೊಗುಮಿಗೆಯಸಂತಸವನೀಯಲದೇಕೆ ತಡಗೈವೆ ॥
ಬಗೆಬಗೆಯ ಭಂಡಾರವನು ನೀಂ ।
ತೆಗೆಸಿ ಬಡವರಿಗಿತ್ತು ತಣಿಸೈ ।
ಸುಗುಣಿ ನೀನೇಳೆಂದು ಬೋಳೈಸಿದಳು ಪಲತೆರದಿ ॥೧೨॥

ಜನನಿ ತನಗತಿಹಿತವ ನೆಸಗುವೆ ।
ನೆನುತಮಾಡಿದಪಾಪಕೃತ್ಯವ ।
ನೆನೆದು ಹಮ್ಮೈಸುತ್ತ ಬಿದ್ದನು ಬಿಗಿವಮೂರ್ಛೆಯಲಿ ॥
ತನಯನನು ಶೈತ್ಯೋಪಚಾರದಿ ।
ವನಿತೆ ಸಂತೈಸಲ್ಕೆ ಕಾಣುತ ।
ಮನುಕುಲಾಧಿಪಸೂನು ರೋಷಾವೇಶಮನನಾದ ॥೧೩॥

ಏನ ನೆನೆದೌ ಪಾಪಿ ರಘುಕುಲ ।
ಹಾನಿ ನಿನ್ನಿಂದಾಯ್ತು ಶಿವಶಿವ ।
ಮಾನವಾಧಿಪನಳಿದನುಳಿದನು ರಾಜ್ಯವನು ರಾಮ ॥
ಮಾನವೆಂಬುದನೊತ್ತಿ ದೂರಕೆ ।
ಹೀನಕಾರ್ಯವ ಬಳಸಿ ಸೀನನು ।
ಮಾನವಿಲ್ಲದೆ ಯೇತಕೀ ಕಡುಕಷ್ಟಕೆಳಸಿದೆಯಾ ॥೧೪॥

ಅಣ್ಣ ದೇವನೆ ನಿನ್ನನುಳಿದೊಡೆ ।
ಚೆಣ್ಣಗೀ ಭರತಂಗೆ ಜೀವನ ।
ವಿನ್ನು ಬೇರೆಲ್ಲಿಹುದು ಬರ್ಪನು ನಿನ್ನ ಜೊಂಬಿಡಿದು ॥
ಕುನ್ನಿಯೀ ಕೈಯ ಮಾತಿಗತಿಸಂ ।
ಪನ್ನನೀನಿವನುಳಿದು ನೆಲನನು ।
ಬಣ್ಣಗೆಡುವರೆ ಬನದಿ ಬಾಬಾರಿದುವೆ ತರವಲ್ಲ ॥ ೧೪ ॥

ದಿನಪತೇಜನೆ ಯೆನ್ನೊಳುಡುಗಲಿ ।
ಘನವಲಾ ನಿನಗೊಲವು ಸತಿಯೊಳು ।
ವನಜಮುಖಿಯಾ ಜಾನಕಿಯು ನೋವಿಂಗೆ ಮರುಗೆಯಲಾ ॥
ಅನುಜ ಲಕ್ಷ್ಮಣ ಬಳಲ್ವನೆಂಬುದ ।
ಮನಕೆ ತಾರದೆ ಚಲವಗೈವರೆ ।
ಮನುಕುಲಾಂಬುಧಿಚಂದ್ರ ಬಾರೆನ್ನೊಡೆಯ ಬಾರೆನುತ ॥ ೧೫ ॥

ಪಲವು ಬಗೆಯಿಂದಾಗಳಣ್ಣನ ।
ಬಲುಗುಣಂಗಳನೆನೆನೆನೆದು ಹಂ ।
ಬಲಿಸುತಿರಲಿದನರಿದು ಬಂದಳು ದೇವಿ ಕೌಸಲ್ಯೆ ॥
ಅಳಲಿದೇತಕೆ ಮಗನೆ ತನ್ನಯ ।
ಚಲವ ವಕ್ಕಿಸಿಕೊಂಡಳಮ್ಮನು ।
ನೆಲಸಿದೆಲ್ಲವು ನಿನ್ನದೈಸಲೆ ಮರುಗಲೇಕಿನ್ನು ॥ ೧೬ ॥

ಬರಿಯಬಯಲಾಡಂಬರವನಿದ ।
ನೊರಸಿಕಳೆ ನಿನಗಿನ್ನು ಸಲ್ಲದು ।
ಹಿರಿಯಮಗ ನೀನಲ್ತೆ ರಾಜ್ಯಕ್ಕೊಡೆಯರಿನ್ನಿಹರೆ ॥
ಕಿರಿಯನಲ್ಲವೆ ರಾಮಭದ್ರನು ! ।
ಹೊರಲುಬಲ್ಲನೆ ನೃಪಕಿರೀಟವ ।
ನೊರೆಯೆನನ್ನೃತವ ಕೇಕಯಾತ್ಮಜೆ ಸಾಕ್ಷಿ ತಾನಿದಕೆ ॥೧೮॥

ಆದುದಾಯಿತು ಮಗನೆ ಭರತನೆ ।
ಹೋದವಾರಿಯ ಮಸೆಯ ಪ್ರಗಿಪರೆ ।
ಈದುರಾತ್ಮಳೆನ್ನನಟ್ಟೈಲ ಮಗನ ಬಳಿಗಾಗಿ ॥
ಕಾದುದೆನ್ನೀಯೊಡಲು ಸೈಸೆನು ।
ನೀದಯಾಪರನಲ್ತೆ ಕಂದನು ।
ಹೋದಮಾರ್ಗವ ತೋರಿಸೆಂದಳಲಿದಳು ಶಶಿವದನೆ ॥೧೯॥

ಮೊದಲೆ ಜನಕನ ಮರಣಮುದಕಿ ।
ನ್ನೊದಗಿತಣ್ಣ ವಿಪಿನನಿರ್ಗಮನವು ।
ಸುದತಿಯಾನಿಷ್ಠುರದನುಡಿ ಮೋಹದಕೆ ಸಹಕಾರಿ ॥
ವಿದಿತವಲ್ಲವೆ ಮೂರ್ಖ ಭರತಂ ।
ಗದುವೆ ಚೋದ್ಯವೆ ಸುಜನರತಿಮೃದು ।
ಹೃದಯರಲ್ಲವೆ ಸೈರಿಸುವರೆಂತಕಟ ಪರರೆಡರ ॥೨೦॥

ತಿಳಿಯೆ ಮೂರ್ಖೆಯು ಹಿರಿಯಮಾತೆಗೆ ।
ಬಳಸಿ ವಂದಿಸಿ ತಾಯ ಸ್ವೈರಿಸು ।
ಕುಲವಿನಾಶಕಕಾರ್ಯವಿದನಾನಕಟ ಗೈಯುವೆನೆ ॥
ಕುಲಶಿರೋಮಣಿರಾಮಚಂದ್ರಂ ।
ಗುಲಿಯಬಾರದಕೇಡನೆಸಗುವ ।
ರಿಳವರಲ್ಲದೆ ರೌರವಕೆ ಬೇರೊಂದುಗತಿಯಹುದೆ ||೨೧||

ಜನನಿ ನಾನೀಪಾಪಕಾರ್ಯವ ।
ಕನಸುಮನಸಿನೊಳರಿದೆನಾದೊಡೆ ।
ಜನಪದಶರಥನುದರದೊಳಗಾನಕಟ ಜನಿಸಿದೆನೆ ॥
ಜನಕ ಬೇರಾರಾಮ ಬೇರೆಂ ।
ದೆನುವಮನಮೆನಗಿರ್ದೊಡೀಗಳೆ ।
ಯನಲನೆನ್ನನು ದಹಿಸಲಿ ನಿನ್ನಿದಿರೊಳತಿಜವದಿ ||೨೨||

ರಾಮನಿಲ್ಲದರಾಜ್ಯಮಿದು ಕು ।
ಗ್ರಾಮದಂದದಿ ತೋರ್ಪುದದರಿಂ ।
ನೇಮವೀಯೈ ಜನನಿ ನಾನೀಗೈದಿ ಕಾನನಕೆ ॥
ಆಮಹಾತ್ಮನ ಪಾದದರ್ಶನ ।
ದಾ ಮಹಾಸುಖವೊಂದುತತಿನಿ ।
ಸ್ಸೀಮನಹರಘುರಾಮನನು ಕರತರುವೆನೀದಿನದಿ ||೨೩||

ಬಂದೊಡೊಡನೆಯೆ ಬರ್ಪೆನಲ್ಲದೊ ।
ಡಿಂದು ನಿಲ್ಲು ತಲವನ ಬಳಯೊಳು ।
ಕಂದಮೂಲವ ಸವಿದು ವಲ್ಕಲಜಟೆಗಳನು ಧರಿಸಿ ॥
ಕುಂದಿಸುವೆನೀತನುವ ಸುರನರ ।
ವೃಂದಸಾಕ್ಷಿಯೊಳೆನುತ ಸಡಗರ ।
ದಿಂದಲೈದುವಭರತನನು ತಡೆದೆಂದಳಿಂದುಮುಖಿ ॥೧೪॥

ಮಗನೆ ಮನ್ನಿಸುವೊಡಲ ಬೇಗೆಯ ।
ನೊಗೆದನುಡಿಗಳ ರಾಮಲಕ್ಷ್ಮಣ ।
ರಗಲಿದೀಕಡುವೃದ್ಧೆಗಾರೈ ಗತಿಯು ನೀನುಳಯೆ ॥
ಬಗೆದು ತೈಲದ ಕೊಪ್ಪರಿಗೆಯಿಂ ।
ತೆಗೆಸು ಭೂಪನ ಮೃತಶರೀರವ ।
ಪುಗಿಸಿ ಚಂದನಚಿತಿಯೊಳಗ್ನಿಯಿನಿರದೆ ಸಂಸ್ಕರಿಸು ॥೧೫॥

ಜನನಿಯೆಂದುದಕೊಪ್ಪಿ ಭರತನು ।
ಮುನಿವಶಿಷ್ಠನನುಜ್ಞೆಯನು ತಾ ।
ನನುಕರಿಸಿ ವೈದಿಕವಿಧಾನದೊಳೆಸಗಿ ಕರ್ಮವನು ॥
ತಣಿಸಿ ವಿಪ್ರರ ದಿವ್ಯವಹಭೋ ।
ಜನಸುದಾನಗಳಿಂದಲಣ್ಣನ ।
ವನನಿವಾಸದ ಭೂರಿಚಿಂತೆಯೊಳಿದ್ದನಾಭರತ ॥೧೬॥

ಅರಸನೈದಿದನಮರಲೋಕಕೆ ।
ತೆರಳಿದನು ಬನದತ್ತ ರಾಮನು ।
ಧರೆಯು ರಕ್ಷಕರಿಲ್ಲದಿನೆ ತಳುವಿದೊಡೆ ಸೊಗಡಹುದು ॥
ಅರಸುಪಟ್ಟವನಾಂತು ಧರೆಯನು ।
ಪೊರೆಯಲನುವಾಗೆನುತ ಮಂತ್ರಿಗ ।
ಳೊರೆಯಲದಕಾಭರತನೆಂದನು ತುಂಬಿ ಕಂಬನಿಯ ॥೨೭॥

ತಂದೆ ತಾನಕಟೆನ್ನನುಳಿಯುತ ।
ಸಂದಬಳಿಕೆನಗಾರು ಗತಿ ಪೂ ।
ರ್ಣೇಂದು ಸದೃಶನು ರಾಮನೇ ಶರಣೆಂದು ನಂಬಿರಲು ॥
ಇಂದು ತನ್ನಯ ಮನದ ಬಯಕೆಗೆ ।
ಬಂಧಕವನೀದುರುಳೆ ತಂದಳು ।
ಮಂದಭಾಗ್ಯಂಗೆನಗದಾರಿನ್ನಿಹರು ಪಾಲಕರು ॥೨೮॥

ಬಾಲನಾಗಿಹತನಗೆ ಧರಣಿಯ ।
ಪಾಲಿಸಲು ಭುಜಶಕ್ತಿ ಸಾಲದು ।
ಮೇಲೆ ತನಗತಿಹಿತವದೀಕೆಯ ದುರ್ಮನೋರಥವ ॥
ಪಾಳುಗೈಸುವುದದರಿನೆಲ್ಲರು ।
ನಾಳೆ ಪಯಣವ ಬೆಳಸಿ ಪೂರ್ಣದ ।
ಯಾಳುವಸುರಘುರಾಮಗಿಂತಿದನರುಹುದಭಿಮತವು ॥೨೯॥

ಕಾನನವ ಬಿಡಿಸುತ್ತಯೋಧ್ಯೆಗೆ ।
ಜಾಣತನದಿಂದವನ ತಿರುಗಿಸೆ ।
ಸೇನೆಯೊಡನೈದುವುದು ನೀವೆಂದೆನುತ ನುಡಿದೊಡನೆ ॥
ದಾನವಾರಿಯು ದಿವ್ಯ ಮೂರ್ತಿಯು ।
ಕಾಣುವಾಸಂಭ್ರಮಕೆ ವೈಗೊ ।
ಟ್ಟಾನರಾಧಿಪಸೂನು ಮಾತೆಯರೊಡನೆ ಹೊರವಂಟ

ಬರುತ ಸರಯುವ ದಾಂಟ ಗುಹನಾ ।
ದರಣೆಯನು ಪತಿಕರಿಸಿ ಜಟೆಯನು ।
ಧರಿಸಿ ಮಾರ್ಗದಿ ಪರಿವಭಾಗೀರಥಿಯನುತ್ತರಿಸಿ ॥ ॥ ೩೦ ॥
ಮೆರೆವಭಾರದ್ವಾಜರಾಶ್ರಮ ।
ಕಿರದೆಪೋಗುತ್ತಿರಗಲಾಮುನಿ ।
ವರರು ಪರಸುತ್ತತಿಥಿಸತ್ಕಾರವನು ಮಿಗೆ ರಚಿಸಿ ॥ ೩೧ ॥

ರಾಮಚಂದ್ರನು ನಮ್ಮ ವನದಲಿ ।
ಕೋಮಲಾಂಗಿಯು ಜಾನಕಿಯುಸಹಿ ।
ತಾಮಹಾಬಲಲಕ್ಷ್ಮಣನ ಕೂಡೈದುತಿಲ್ಲಿರ್ದು ॥
ಭೂಮಿಸುರರುಬ್ಬಟೆಯು ಬಲುಹೆಂ ।
ದಾಮನೋಹರವಾಗಿ ರಂಜಿಪ ।
ಕಾಮಿತದಫಲಪುಷ್ಪವೀಯುವ ಚಿತ್ರಕೂಟದಲಿ ॥ ೩೨ ॥

ತಿರಿದು ತಳಿರನು ಲಕ್ಷ್ಮಣನು ತಾಂ |
ವಿರಚಿಸಿದನವಪರ್ಣಶಾಲೆಯೊ |
ಳಿರುತಿಹನು ನೀನಲ್ಲಿಗೈದಿದೊಡವನ ಕಾಂಬೆಯೆನೆ ||
ಹರುಷವಾನುತ ಮನದಿ ಮುನಿಪಂ |
ಗೆರಗಿ ಬೀಳ್ಕೊಂಡಾತನನು ಮುಂ |
ಬರಿಯುತಣ್ಣನ ನೋಳ್ಪಭರದಿಂ ತೆರಳಿದನು ಭರತ ||೩೩||

ಇತ್ತಲಿವನಿಂತೈದುತಿರೆ ಬಳಿ |
ಕತ್ತ ರಾಮನು ಜನಕಪುತ್ರಿಯು |
ಚಿತ್ತದಾಸರ ಕಳೆವೆನೆನ್ನುತ ಚರಿಸುತಲ್ಲಲ್ಲಿ ||
ಮತ್ತಕಾಶಿನಿ ಸಿಟ್ಟಸೀಗಿರಿ |
ಯೊತ್ತಿನಲಿ ಮಂದಾಕಿನೀನದಿ |
ಸುತ್ತಿ ಪರಿಯುವಸೊಬಗ ಮೀರಿಹುದಲ್ತೆ ಸರಯುವನು ||೩೪||

ಇದರ ತೀರದ ವೃಕ್ಷಗಳೊಳಿಹ |
ವಿಧವಿಧದ ಪುಷ್ಪಗಳನುದಿರಿಸು |
ತದರಕಂಪಿಂದೊಗೆವಮರುತನು ಸೊಂಪಬೀರುತಲಿ ||
ಸುದತಿಮಣಿ ಸಂತಸವ ತೋರುತ |
ಸದಯಭಾವದಿ ಚರಿಸುತಿರ್ಪನ |
ವ್ರೊದಗಲಹುದೇ ಯಸಿದೊಡೆ ನಮಗಿದುವೆ ನಗರಿಯಲಿ ||೩೫||

ಮೃಗಸಮೂಹಗಳುದಕಪಾನದಿ ।
ನೊಗೆದತೃಷೆಯನು ಕಳೆಯುತಿರ್ಪವು ।
ಸುಗತಿರಾಜ್ಯವ ಸೂರೆಗೊಳುವಾಮುನಿಗಳದರೊಳಗೆ ॥
ಬೊಗಸೆಯಲಿ ನೀರ್ವೊಗೆನು ಮೇಲಿಹ ।
ಗಗನಮಣಿಗರ್ಘ್ಯಗಳನೀಯುತ ।
ಸೊಗಸಿನಿಂದಲಿ ಮೀಯುವಂದವನೋಡು ನೀನರಸಿ ॥ ೩೬ ॥

ಇನಿಯಳೊಡನೀಪರಿಯೊಳಾಡುತ ।
ದಿನಕುಲಾಂಬರದಿನಮಣಿಯು ತ ।
ನ್ನನುಜನೊಡನೊಲವಿಂದಲಾಶ್ರಮದಲ್ಲಿ ಕುಳಿತಿರಲು ॥
ವನದ ಮಧ್ಯದೊಳರವೆ ಕೆಂದೂ ।
ಳಿನನ ಮುಸುಕುವ್ರೊಲೇಳೆ ಕಂಡದ ।
ರನುವದೇನದ ತಿಳಿದು ಬಂದೆನಗರುಹು ನೀನೆನುತ ॥ ೩೭ ॥

ಅಗ್ರಜನು ನುಡಿಯಲ್ಕೆ ಕೇಳ್ದು ಸ ।
ಮಗ್ರಬಲಸೌಮಿತ್ರಿ ಭೂರುಹ ।
ದಗ್ರಭಾಗವನೇರುತೈತಹಸೇನೆಯನು ನೋಡಿ ॥
ವ್ಯಗ್ರಮಾನಸನಾಗಿ ನಮ್ಮನು ।
ನಿಗ್ರಹಿಸಲೆಂದೆನುತ ಭರತನು ।
ವಿಗ್ರಹಕ್ಕೆಳಸುತ್ತ ಬರುತಿಹಪರಿಯಿದೆಂದರಿದು ॥ ೩೮ ॥

ದೇವಿಯನು ಜೋಪನವಗೈಯುತ ।
ದೇವಬಿಲುದುಡುಕೇಳು ಭರತನ ।
ಭಾವ ಕೆಟ್ಟಿತು ಸೇನೆಯೊಡವೆರಸಿದಕೋ ಬರುತಿಹನು ॥
ನಾವು ಮೈಮರೆದಿದ್ದೆವಾದೊಡೆ ।
ನೋವನೆಸಗದೆ ಬಿಡನು ತನಗಿ ।
ನ್ನೀವುದಾಜ್ಞೆಯನವನನಟ್ಟುವೆ ಜವನ ಬಳಿಗೆನಲು ॥೩೯॥

ತಮ್ಮ ದುಡುಕದಿರಿತ್ತ ಬಾರೈ ।
ನಮ್ಮ ಮಾತನು ಕೇಳು ಭರತನ ।
ದೊಮ್ಮೆಯಾವರು ಕನಸುಮನಸಿನೊಳೆಮ್ಮ ಮೀರಿಹನೆ ॥
ದುಮ್ಮತಿಯೆ ದುರ್ನೀತಿಯೆಂದೆನು ।
ತಮ್ಮನನು ಧಿಕ್ಕರಿಸಿ ನಮ್ಮನೆ ।
ನೆಮ್ಮಿ ಬಂದಿಹನಲ್ಲದನ್ಯವ ಬಳಸುವನೆ ಮನದಿ ॥೪೦॥

ತಪ್ಪನೆಣಿಸುವತಮ್ಮನಲ್ಲವ ।
ನೊಪ್ಪುವನೆ ದುಷ್ಕಾರ್ಯಲವವನು ।
ಬೊಪ್ಪನವರಲ್ಲಿರ್ಪಭಕ್ತಿಯನೆನ್ನೊಳಿರಿಸಿಹನು ॥
ನಿಪ್ಪಸರದಲಿ ನಡೆವಕೀರ್ತಿಯ ।
ನಪ್ಪಲಾಗದು ಲಕ್ಷ್ಮಣನೆ ನಿನ ।
ಗಿಪ್ಪವೀರುಪಕಕಟ ಸೋದರವಧೆಯೆ ಪರಿಣಾಮ ॥೪೧॥

ತಂದೆಯಾಡಿದನುಡಿಯ ಪಾಲಿಸ ।
ಲೆಂದು ಬಂದಿಹತನಗೆ ಭರತಸ ।
ಕೊಂದು ಬಂದಾರಾಜ್ಯಮೇತಕೆ ಗೈವೆನೇನದನು ॥
ಕಂದಭರತನು ನೀನುಮಿಲ್ಲದೆ ।
ಬಂದಸುರಪನ ಪದವ ಲೆಕ್ಕಿಸೆ ।
ನಿಂದು ನೀವೇ ಸಕಲಸಂಪದವೆಂದನಾ ರಘುಜ ॥ ೪೧ ॥

ಕೇಳುತಿರ್ದನು ಲಕ್ಷ್ಮಣನು ಕ ।
ಣ್ಣಾಲಿನೀರೇರಿದವು ಶಿರವನು ।
ಜೋಲುಗೊಟ್ಟು ಹಸಾದವೆಂದನು ಮುಗಿದು ಕರಯುಗವ ॥
ಮೇಲುವೆದ್ದುದ ರವಣಿ ನಿಂದುದು ।
ಆಳಿನಬ್ಬರ ಕೊನೆಗೆ ಸಂದುದು ।
ಪಾಳೆಯವು ಹೊರಬನಕೆ ಬಂದುದು ಕುಂದಿತಾರ್ಭಟೆಯು ॥ ೪೨ ॥

ಸೇನೆಯಾಶ್ರಮದತ್ತ ಪೋದೊಡೆ ।
ಮಾನವೇಶನು ಮಾನಸದೊಳನು ।
ಮಾನಿಸುವನೋ ಯೆನುತದೂರದೊಳದನು ನಿಲ್ಲಿಸುತ ॥
ಜ್ಞಾನಿಗಳ ಸಮುಜೋಳಿಭರತನ ।
ನೂನಬಲಶತ್ರುಘ್ನನೊಡನೆ ನಿ ।
ಧಾನದಿಂ ಪದಚಾರಿಯಾಗೈದಿವನು ದರುಶನಕೆ ॥ ೪೪

ಇಂದು ತನ್ನನು ಮನ್ನಿಪನೆ
ದಿಂದಲ
ನೆಂದು
ಮಂದ
ನಿಂದು
ಹಿಂದುಮುಂದನ

ಅಂದು
ಳಿಂದ ರಾ
ವಿಂದ ದರ್ಭಾಸನದ ಸೀತಾಲಕ್ಷ್ಮ
ಅಂದವಾದಾದೇಹಕಾಂತಿಯಿ |
ನಿಂದುವನು ಸಲೆ ಜರಿವ
ಯಿಂದ ಮಂಡಿಸಿ ಮೆರೆವಪ್ರೇಮನ

ಕಂಡನವನ ಯುವ್ರೋ |
ಮಂಡೆಯ ಳನು ಧರಿಸುತ |
ಖಂಡಕೃಷ್ಣಮೃಗಾಜಿನವನುರೆ ಪ್ರೆಮ್ಮ ಪನ ||
ಕಂಡಜನರಘುತಂಡವನು ನೆರೆ |
ದಿಂಡುದರಿವಾನಿರ್ಮಲಾಂಗನ |
ಚಂಡಭುಜಬಲರಾದಿದೇವನ ಕಂಡನಾಭರತ || ೪೩ ||